ಬೇಂದ್ರೆ ಹಾಗೂ ವಿಜ್ಞಾನ

(ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ನೀಡಿದ
ವರಕವಿ ಡಾ. ದ.ರಾ. ಬೇಂದ್ರೆ ದತ್ತಿ ಉಪನ್ಯಾಸ – ೨೦೦೬)



• ಡಾ. ಕೆ.ಎಸ್. ಶರ್ಮಾ
• ಡಾ. ವಾಮನ ಬೇಂದ್ರೆ

ಪ್ರಕಟಣೆ : ಬೇಂದ್ರೆ ಸಂಶೋಧನ ಸಂಸ್ಥೆ, ಹುಬ್ಬಳ್ಳಿ

WebElements™ periodic table

Group	1	2		3	4	5	6	7	8	9	10	11	12	13	14	15	16	17	18
Period																			
1	1 H																		2 He
2	3 Li	4 Be												5 B	6 C	7 N	8 O	9 F	10 Ne
3	11 Na	12 Mg												13 Al	14 Si	15 P	16 S	17 Cl	18 Ar
4	19 K	20 Ca		21 Sc	22 Ti	23 V	24 Cr	25 Mn	26 Fe	27 Co	28 Ni	29 Cu	30 Zn	31 Ga	32 Ge	33 As	34 Se	35 Br	36 Kr
5	37 Rb	38 Sr		39 Y	40 Zr	41 Nb	42 Mo	43 Tc	44 Ru	45 Rh	46 Pd	47 Ag	48 Cd	49 In	50 Sn	51 Sb	52 Te	53 I	54 Xe
6	55 Cs	56 Ba	*	71 Lu	72 Hf	73 Ta	74 W	75 Re	76 Os	77 Ir	78 Pt	79 Au	80 Hg	81 Tl	82 Pb	83 Bi	84 Po	85 At	86 Rn
7	87 Fr	88 Ra	**	103 Lr	104 Rf	105 Db	106 Sg	107 Bh	108 Hs	109 Mt	110 Ds	111 Rg	112 Uub	113 Uut	114 Uuq	115 Uup	116 Uuh	117 Uus	118 Uuo

*Lanthanoids	*	57 La	58 Ce	59 Pr	60 Nd	61 Pm	62 Sm	63 Eu	64 Gd	65 Tb	66 Dy	67 Ho	68 Er	69 Tm	70 Yb
**Actinoids	**	89 Ac	90 Th	91 Pa	92 U	93 Np	94 Pu	95 Am	96 Cm	97 Bk	98 Cf	99 Es	100 Fm	101 Md	102 No



ಬೇಂದ್ರೆ ಮತ್ತು ವಿಜ್ಞಾನ

"A day will come when a great Synthasizer endowed with high mathematical and imaginative gifts will link Physics and Chemistry to the vegetable and animal kingdoms and so to the human"

- C. Jinaraj Das

ಪರಿವಿಡಿ

1 ಅನಾವರಣ - ಡಾ|| ಕೆ. ಎಸ್. ಶರ್ಮಾ 5

2 ಭೂಮಿಕೆ - ಡಾ|| ವಾಮನ ಬೇಂದ್ರೆ 8

3 ಬೇಂದ್ರೆ ಮತ್ತು ವಿಜ್ಞಾನ - ಡಾ|| ಕೆ. ಎಸ್. ಶರ್ಮಾ 12

4 ಬೇಂದ್ರೆ ವಿಜ್ಞಾನ ಸಿದ್ಧಾಂತ-ಪ್ರಯೋಗ :
ಜೀವ ರಸಾಯನ ಶಾಸ್ತ್ರದ ದೃಷ್ಟಿಕೋನ - ಡಾ|| ವಾಮನ ಬೇಂದ್ರೆ 25

ಬೇಂದ್ರೆ ಮತ್ತು ವಿಜ್ಞಾನ

ಸಂಪಾದಕರು :

ಡಾ|| ವಾಮನ ಬೇಂದ್ರೆ

ಸಹ-ನಿರ್ದೇಶಕರು,

ಬೇಂದ್ರೆ ಸಂಶೋಧನ ಸಂಸ್ಥೆ

ಪ್ರಕಾಶಕರು :

ಡಾ|| ಕೆ. ಎಸ್. ಶರ್ಮಾ,

ನಿರ್ದೇಶಕರು, ಬೇಂದ್ರೆ ಸಂಶೋಧನ ಸಂಸ್ಥೆ

ಶ್ರೀಮಾತಾ ಪ್ರಕಾಶನ,

ಅಂಬಿಕಾತನಯದತ್ತ ವೇದಿಕೆ

"ವಿಶ್ವಶ್ರಮ ಚೇತನ", ಗೋಕುಲ ರಸ್ತೆ ಹುಬ್ಬಳ್ಳಿ - ೫೮೦ ೦೩೦.

ಕರ್ನಾಟಕ ರಾಜ್ಯ

ಬೇಂದ್ರೆ ಮತ್ತು ವಿಜ್ಞಾನ
★
ಸಂಪಾದಕರು : ಡಾ|| ವಾಮನ ಬೇಂದ್ರೆ, ಸಹ ನಿರ್ದೇಶಕರು, ಬೇಂದ್ರೆ ಸಂಶೋಧನ ಸಂಸ್ಥೆ
★
ಪ್ರಕಾಶಕರು :
ಡಾ|| ಕೆ. ಎಸ್. ಶರ್ಮಾ, ನಿರ್ದೇಶಕರು, ಬೇಂದ್ರೆ ಸಂಶೋಧನ ಸಂಸ್ಥೆ
ಶ್ರೀಮಾತಾ ಪ್ರಕಾಶನ,
ಅಂಬಿಕಾತನಯದತ್ತ ವೇದಿಕೆ, 'ವಿಶ್ವಶ್ರಮ ಚೇತನ', ಗೋಕುಲ ರಸ್ತೆ, ಹುಬ್ಬಳ್ಳಿ - 580 030.
★
ಹಕ್ಕುಗಳು :
© ಡಾ|| ವಾಮನ ಬೇಂದ್ರೆ,
(ಪಾವರ್ ಆಫ್ ಅಟಾರ್ನಿ ಹೋಲ್ಡರ್)
13, ಶ್ರೀಮಾತಾ, ಸಾಧನಕೇರಿ, ಧಾರವಾಡ-580 008.
★
ಬೆಲೆ : ರೂ.25-00
★
ಆವೃತ್ತಿಗಳು : ಪ್ರಥಮ ಆವೃತ್ತಿ 2006-ಶ್ರೀಮತಿ ಲಕ್ಷ್ಮೀಬಾಯಿ ಬೇಂದ್ರೆ ಜನ್ಮ ಶತಮಾನೋತ್ಸವ-17-4-200
★
ಆಕಾರ : 1/8 ಡೆಮ್ಮಿ
★
ಹೊರಹೊದಿಕೆ ವಿನ್ಯಾಸ : ಶ್ರೀ ರವೀಂದ್ರ ವಿಶ್ವಜ್ಞ, ಧಾರವಾಡ
★
ಪುಟ ವಿನ್ಯಾಸ/ಡಿಟಿಪಿ : ಶ್ರೀ ಈರಣ್ಣ ನೂಲ್ವಿ, ಡಾ|| ಕೆ. ಎಸ್. ಶರ್ಮಾ ಐ.ಟಿ.ಸಿ., ಹುಬ್ಬಳ್ಳಿ
★
ಮುದ್ರಕರು :
ಶರ್ಮಾ ಮುದ್ರಕರು,
4, ಪತ್ರಕರ್ತರ ಕಾಲನಿ, ಹುಬ್ಬಳ್ಳಿ - 580 032.
★
ಕೃತಿಗಳಿಗಾಗಿ ಬರೆಯಿರಿ :
ಶ್ರೀಮಾತಾ ಪ್ರಕಾಶನ,
'ವಿಶ್ವಶ್ರಮ ಚೇತನ', ಗೋಕುಲ ರಸ್ತೆ ಹುಬ್ಬಳ್ಳಿ - 580 030. ದೂರವಾಣಿ : (0836) 2330466.

ರವೀಂದ್ರ ಪುಸ್ತಕಾಲಯ,
ಕಾರ್ಗಿಲ್ ಕಾಲೋನಿ-577421, ದೂರವಾಣಿ : 08186-228616.

ಅನಾವರಣ

ವರಕವಿ ಡಾ||ದ.ರಾ. ಬೇಂದ್ರೆಯವರ "Theory of Immortality: A Probable roblem and a Possible Solution" ಎಂಬ "Cosmology Series-No.1" ುಹೊತ್ತಿಗೆಯನ್ನು ೧೯೭೭ರ ಕರ್ನಾಟಕ ರಾಜ್ಯೋತ್ಸವದ ದಿನದಂದು (ಒಂದನೇ ನವೆಂಬರ್) ಳಕಿಗೆ ತಂದಿದ್ದರು. ಇದರಲ್ಲಿ ಅವರು ತಮ್ಮ ವೈಜ್ಞಾನಿಕ ಸಂಶೋಧನೆಗಳ ಮಹತ್ವದ ೂತ್ರಗಳನ್ನು ಪ್ರಕಟಿಸಿದ್ದರು. ಅವುಗಳಲ್ಲಿ ಒಂದು ಭಾಗ ''ಮೆಂಡಲಿಫ್ ಪೀರಿಯಾಡಿಕ್ ೀಬಲ್'' ಕುರಿತಾಗಿಯೂ ಇತ್ತು. ಭೌತಶಾಸ್ತ್ರ ಹಾಗೂ ರಸಾಯನಶಾಸ್ತ್ರಜ್ಞರು ಊಹಿಸಿದ ದಾರ್ಥಗಳ ಇರುವಿಕೆಯ ಕುರಿತು ಭವಿಷ್ಯವನ್ನು ತಮ್ಮದೇ ಆದ ''ಬೇಂದ್ರೆ ಪೀರಿಯಾಡಿಕ್ ೀಬಲ್''ದಲ್ಲಿ ಸೇರ್ಪಡೆಮಾಡಿದ್ದರು. ಈ ಕುರಿತಲ್ಲದೆ ಪ್ರೈಮ್ ನಂಬರ್ಸ್, ಪರ್‌ಫೆಕ್ಟ್ ಂಬರ್ಸ್ ಮುಂತಾದ ವಿಷಯಗಳನ್ನು ಕುರಿತು ಕೂಡ ಅನೇಕ ವರುಷಗಳ ಕಾಲ ಆಳವಾಗಿ ಧ್ಯಯನ ಮಾಡಿದ್ದರು. ಗುರುವರ್ಯ ಬೇಂದ್ರೆಯವರು ''ಕಾಸ್‌ಮೂಲಜಿ ಸೀರೀಸ್''ನಲ್ಲಿ ನೇಕ ಪ್ರಕಟಣೆಗಳನ್ನು ಹೊರತರಬೇಕೆಂದು ಬಯಸಿದ್ದರು, ಯೋಜಿಸಿದ್ದರೂ ಕೂಡ. ಆದರೆ ಕಾರ್ಯ ಸಫಲವಾಗಲಿಲ್ಲ ಎನ್ನುವುದು ವಿಷಾದನೀಯ ಸಂಗತಿ. ಈ ಮಹಾಕವಿ, ಂಹಾವಿಜ್ಞಾನಿ ಬೇಂದ್ರೆ, ತಮ್ಮ ಅನೇಕ ನೋಟ್‌ಬುಕ್‌ಗಳಲ್ಲಿ ಹಾಗೂ ಅವರು ಅಭ್ಯಾಸ ಾಡುತ್ತಿದ್ದ ವಿಜ್ಞಾನ ಗ್ರಂಥಗಳಲ್ಲಿ ಸಾಕಷ್ಟು ಟಿಪ್ಪಣಿಗಳನ್ನು, ಅನಿಸಿಕೆಗಳನ್ನು ದಾಖಲಿಸಿದ್ದಾರೆ. ವುಗಳ ಆಧಾರದ ಮೇಲೆ ಬೇಂದ್ರೆ ವಿಜ್ಞಾನ ಚಿಂತನೆಗಳನ್ನು ಹಾಗೂ ಸಂಶೋಧನೆಗಳನ್ನು ್ರೀಢೀಕರಿಸಿ, ಪ್ರಕಟಿಸಬೇಕಾಗಿದೆ. ಈ ಕಾರ್ಯವನ್ನು ಹುಬ್ಬಳ್ಳಿಯ ಬೇಂದ್ರೆ ಸಂಶೋಧನ ಸ್ಥೆಯು ''ಬೇಂದ್ರೆ ಸಮಗ್ರ ಸಾಹಿತ್ಯ ಪ್ರಕಟಣೆ''ಯ ಭಾಗವಾಗಿ ಹೊರತರುವ ಯೋಜನೆ ಮ್ಮಿಕೊಂಡಿದೆ.

ಈ ಸಂಧಿಕಾಲದಲ್ಲಿ ಮುಂಬೈ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕನ್ನಡ ವಿಭಾಗದ ುಖ್ಯಸ್ಥರಾದ ಡಾ||ವಸಂತಕುಮಾರ್ ತಾಳ್ತಜೆಯವರು ಕನ್ನಡ ವಿಭಾಗದ ರಜತಮಹೋತ್ಸವದ

ಅಂಗವಾಗಿ ಏರ್ಪಡಿಸಿದ್ದ ''ದ.ರಾ. ಬೇಂದ್ರೆ ದತ್ತಿ ಉಪನ್ಯಾಸ''ವನ್ನು ''ಬೇಂದ್ರೆ ಹಾಗೂ ವಿಜ್ಞಾನ'' ವಿಷಯವನ್ನು ಕುರಿತು ನಾನು ವಿಶೇಷೋಪನ್ಯಾಸವನ್ನು ಮಾಡಬೇಕೆಂದೂ, ಈ ಭಾಷಣದ ಅಧ್ಯಕ್ಷತೆಯನ್ನು ಡಾ|| ವಾಮನ ಬೇಂದ್ರೆಯವರು ವಹಿಸಬೇಕೆಂದೂ ಆಮಂತ್ರಣವನ್ನಿತ್ತರು. ಈ ಆಮಂತ್ರಣವನ್ನು ಒಂದು ಸುವರ್ಣಾವಕಾಶವೆಂದು ಪರಿಗಣಿಸಿ, ಇದನ್ನು ಒಪ್ಪಿಕೊಂಡೆವು.

ದ. ರಾ. ಬೇಂದ್ರೆಯವರ ಗ್ರಂಥಾಲಯದಲ್ಲಿರುವ ೧೬,೦೦೦ ಗ್ರಂಥಗಳ ಗರ್ಭದಲ್ಲಿ ಅಡಗಿಕೊಂಡಿದ್ದ ಕೆಲವು ಅಮೂಲ್ಯ ಅಂಶಗಳನ್ನು ಶೋಧಿಸಿ, ''ಬೇಂದ್ರೆ ಹಾಗೂ ವಿಜ್ಞಾನ'' ಎಂಬ ವಿಷಯವನ್ನು ಕುರಿತಾಗಿ ಒಂದು ಉಪನ್ಯಾಸವನ್ನು ಸಿದ್ಧಪಡಿಸಲಾಯಿತು. ನಾನು ಈ ವಿಷಯದ ವ್ಯಾಪ್ತಿಯಲ್ಲಿ ಪ್ರೈಮ್ ನಂಬರ್ಸ್, ಪರ್‌ಫೆಕ್ಟ್ ನಂಬರ್ಸ್, ಪೀರಿಯಾಡಿಕ್ ಟೇಬಲ್ ಹಾಗೂ ವಿಶ್ವವಿಜ್ಞಾನಗಳನ್ನು ಕುರಿತಾಗಿ ಮಹಾಕವಿ ಬೇಂದ್ರೆಯವರ ಚಿಂತನೆಗಳ ಪ್ರತಿಪಾದನೆಯನ್ನು ಮಾಡಿದೆ. ಡಾ|| ವಾಮನ ಬೇಂದ್ರೆಯವರು ಅವರ ತಂದೆಯವರಾದ ಮಹಾವಿಜ್ಞಾನಿ ದ. ರಾ. ಬೇಂದ್ರೆಯವರ ಬಯೋ-ಕೆಮಿಕಲ್ ವಿಜ್ಞಾನ ಕುರಿತಾದ ಚಿಂತನೆಗಳನ್ನು ಕುರಿತು ಅಧ್ಯಕ್ಷೀಯ ಭಾಷಣ ಮಾಡಿದರು. ಈ ಎರಡೂ ಉಪನ್ಯಾಸಗಳನ್ನೂ ಒಂದೇ ಗಂಟೆಯಲ್ಲಿ ಪೂರ್ಣಗೊಳಿಸಬೇಕೆಂಬ ಕಾಲಮಿತಿ ಇದ್ದುದರಿಂದ ಅತ್ಯಂತ ಸಂಕ್ಷಿಪ್ತವಾಗಿ ಈ ವಿಷಯ ಕುರಿತಾಗಿ ಈ ಉಪನ್ಯಾಸಗಳಲ್ಲಿ ಮಂಡಿಸಲಾಗಿದೆ. ಆದರೂ ಕೂಡ, ನನ್ನ ಹಾಗೂ ಡಾ|| ವಾಮನ ಬೇಂದ್ರೆಯವರ ಉಪನ್ಯಾಸಗಳೆರಡನ್ನೂ ಒಂದೆಡೆ ಕಿರುಹೊತ್ತಿಗೆಯ ರೂಪದಲ್ಲಿ ಬೆಳಕಿಗೆ ತಂದು, ಮಹಾಕವಿ ಬೇಂದ್ರೆಯವರ ವೈಜ್ಞಾನಿಕ ಚಿಂತನೆಗಳನ್ನು ವಿಶ್ವಕ್ಕೆ ಪರಿಚಯ ಮಾಡಿಸುವ ಉದ್ದೇಶ ನನ್ನದಾಗಿದೆ. ಬೇಂದ್ರೆ ಸಾಹಿತ್ಯಾಭಿಮಾನಿಗಳ ಜೊತೆಗೆ, ವಿಜ್ಞಾನಿಗಳೂ ಕೂಡ ಈ ಕೃತಿಯನ್ನು ಸ್ವಾಗತಿಸುವರೆಂಬ ವಿಶ್ವಾಸ ನನಗಿದೆ.

''ಬೇಂದ್ರೆ ಹಾಗೂ ವಿಜ್ಞಾನ'' - ವಿಷಯ ಕುರಿತಾಗಿ ಭಾಷಣಗಳನ್ನು ಸಿದ್ಧಪಡಿಸುವ ಹಂತದಿಂದ ಪ್ರಕಟಣೆಯ ಹಂತದವರೆಗೆ ಮಹತ್ವದ ಪಾತ್ರವನ್ನು ವಹಿಸಿದವರು ನನ್ನ ಆತ್ಮೀಯ ಗೆಳೆಯರೂ, ವರಕವಿ ಬೇಂದ್ರೆಯವರ ಆಪ್ತ ಶಿಷ್ಯಂದಿರಲ್ಲಿ ಒಬ್ಬರೂ ಆದ ಡಾ|| ಜಿ. ವಿ. ಕುಲಕರ್ಣಿಯವರು. ಅಂತೆಯೇ ಜೀವಿಯವರ ಧರ್ಮಪತ್ನಿ, ಸಹೋದರಿ ಶ್ರೀಮತಿ ಕಲಾ ಜಿ. ಕುಲಕರ್ಣಿಯವರೂ ಕೂಡ ಈ ಉಪಕ್ರಮಕ್ಕೆ ಸಹಕಾರ ನೀಡಿದ್ದಾರೆ. ಇವರಿಬ್ಬರಿಗೂ ನನ್ನ ಕೃತಜ್ಞತೆಗಳು.

''ಬೇಂದ್ರೆ ಹಾಗೂ ವಿಜ್ಞಾನ'' ಕೃತಿ ಬೆಳಕು ಕಾಣುತ್ತಿದ್ದರೆ ಇದರ ಪೂರ್ಣ ಶ್ರೇಯಸ್ಸು ಡಾ|| ವಸಂತಕುಮಾರ್ ತಾಳ್ತಜೆ ಇವರಿಗೆ ಸಲ್ಲಬೇಕು ಎಂದು ಮತ್ತೊಮ್ಮೆ ಹೇಳಬಯಸುವೆ. ಸ್ವಾರಸ್ಯಕರವಾದ ಅಂಶವೆಂದರೆ ದ. ರಾ. ಬೇಂದ್ರೆಯವರು ಅಸ್ತಂಗತರಾದದ್ದು ೧೯೮೧ರಲ್ಲಿ. ಅವರ ಮರಣ ಸ್ಮರಣೆಯ ರಜತ ವರುಷ ಇದು. ಇಂಥ ಸುಸಂದರ್ಭವನ್ನು ಅವರಿಗೆ ಅತ್ಯಂತ ಪ್ರೀತಿಯ ವಿಷಯವಾದ ವಿಜ್ಞಾನವನ್ನು ಕುರಿತು, ಈ ಕೃತಿಯನ್ನು ಪ್ರಕಟಿಸಲು ಸಾಧ್ಯವಾದದ್ದಕ್ಕೆ ನಿಜಕ್ಕೂ ಸಂತಸವಾಗಿದೆ. ಈ ದತ್ತಿ ಉಪನ್ಯಾಸವನ್ನು ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗವು ಅಲ್ಲಿಯ ಭೌತಶಾಸ್ತ್ರ ಸಭಾಭವನದಲ್ಲಿ ಏರ್ಪಡಿಸಿದ್ದು ಒಂದು

ಕಾಕತಾಳೀಯವಾದರೂ, ಔಚಿತ್ಯಪೂರ್ಣ. ಈ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಸಮರ್ಪಕವಾಗಿ ನಿರ್ವಹಿಸಿದ ಡಾ|| (ಶ್ರೀಮತಿ) ಗಿರಿಜಾ ಶಾಸ್ತ್ರಿಯವರಿಗೆ, ಈ ಉಪನ್ಯಾಸಗಳನ್ನು ಆಲಿಸಿ - ಸಂತಸಪಟ್ಟ ಮುಂಬೈ ಕನ್ನಡಿಗ ರಸಿಕವೃಂದಕ್ಕೂ ಕೃತಜ್ಞತೆಗಳು.

ಇದರ ಡಿ.ಟಿ.ಪಿಯನ್ನು ಕೆ. ಎಸ್. ಶರ್ಮಾ ಕೈಗಾರಿಕಾ ತರಬೇತಿ ಸಂಸ್ಥೆಯ ಶ್ರೀ ಬಸವರಾಜ ಜೂಗಳ ಹಾಗೂ ಡಿ.ಟಿ.ಪಿ. ವಿಭಾಗದ ಮುಖ್ಯಸ್ಥರಾದ ಶ್ರೀ ಈರಣ್ಣ ನೂಲ್ವಿ ಇವರು ಸಕಾಲಕ್ಕೆ ಸಮರ್ಪಕವಾಗಿ ನಿರ್ವಹಿಸಿದ್ದಾರೆ. ಇದರ ಮುದ್ರಣ ಕಾರ್ಯವನ್ನು ಶರ್ಮಾ ಮುದ್ರಣಾಲಯದ ಶ್ರೀ ಶಾಂತಕುಮಾರ್ ಹಾಗೂ ಶ್ರೀ ಬ್ಯಾಡಗಿ ನಿರ್ವಹಿಸಿದ್ದಾರೆ. ಮುಖಪುಟದ ವಿನ್ಯಾಸವನ್ನು ಶ್ರೀ ರವೀಂದ್ರ ವಿಶ್ವಜ್ಞ ಹಾಗೂ ಶ್ರೀ ರವೀಂದ್ರ ಶಿರೋಳ್ಕರ್ ಸಿದ್ಧಪಡಿಸಿದ್ದಾರೆ. ಇವರೆಲ್ಲರಿಗೂ ಸಂಸ್ಥೆಯ ಪರವಾಗಿ ಒಲವಿನ ನಮನಗಳು.

ಬೇಂದ್ರೆ ಸಂಶೋಧನ ಸಂಸ್ಥೆಯು ಈ ಕಿರುಹೊತ್ತಿಗೆಯನ್ನು ಕವಿಪತ್ನಿ ಶ್ರೀಮತಿ ಲಕ್ಷ್ಮೀಬಾಯಿ ಜನ್ಮಶತಮಾನೋತ್ಸವ ಸಮಾರಂಭದ ಅಂಗವಾಗಿ ಪ್ರಕಟಿಸುತ್ತಿದೆ. ಬೇಂದ್ರೆ ಸಾಹಿತ್ಯಾಸಕ್ತರೂ ಹಾಗೂ ವಿಜ್ಞಾನಪ್ರಿಯರೂ ಇದನ್ನು ಸ್ವಾಗತಿಸುವರೆಂಬ ನಂಬಿಕೆ ನಮ್ಮದು.

ಹುಬ್ಬಳ್ಳಿ — ಡಾ|| ಕೆ. ಎಸ್. ಶರ್ಮಾ
೧೭-೪-೨೦೦೬ — ನಿರ್ದೇಶಕರು, ಬೇಂದ್ರೆ ಸಂಶೋಧನ ಸಂಸ್ಥೆ

ಭೂಮಿಕೆ

ದ.ರಾ. ಬೇಂದ್ರೆಯವರು ೧೯೩೩-೩೫ರ ವರೆಗೆ ಎಂ.ಎ. ಪದವಿಗಾಗಿ ಕನ್ನಡ ಹಾಗೂ ಇಂಗ್ಲೀಷ್ (ಪ್ರಧಾನ ಹಾಗೂ ಉಪಪ್ರಧಾನ) ವಿಷಯಗಳನ್ನು ಅಭ್ಯಸಿಸಿ, ಮುಂಬೈ ವಿಶ್ವವಿದ್ಯಾಲಯ ಪರೀಕ್ಷೆಯನ್ನು ೧೯೩೫ರ ಸಾಯಂಕಾಲ ಮುಗಿಸಿದರು. ಪರೀಕ್ಷೆಗಾಗಿ ಓದುವುದು ಬೇಂದ್ರೆಯವರಿಗೆ ಪ್ರೀತಿಯದಾಗಿರಲಿಲ್ಲ. ಮುಕ್ತರಾದ ಬೇಂದ್ರೆ, ಪರೀಕ್ಷೆ ಮುಗಿದೊಡನೆ, ಗ್ರಂಥವಾಚನದ ಹವ್ಯಾಸ ಹಾಗೂ ಅಭಿರುಚಿಯ ಕರೆಗೆ ಓಗೊಟ್ಟು ಸಮುದ್ರದ ದಂಡೆಗೆ ಓಡಿದರು. ಅಂದೇ ಒಂದು ಹಡಗದಲ್ಲಿ ಬಂದ ಹೊಚ್ಚಹೊಸ ಪುಸ್ತಕಗಳ ಮಾರಾಟ ಸಾಗಿತ್ತು. ಪುಸ್ತಕಗಳ ಬೆಲೆ ವಿಪರೀತ ಕಡಿಮೆ. ಹೀಗಾಗಿ ತಮ್ಮ ಕಡೆಗಿದ್ದ ಸಂಪೂರ್ಣ ಹಣಕ್ಕೆ ಬರುವ ಇಂಗ್ಲಿಷ್ - ಕಾವ್ಯ, ನಾಟಕ, ಪ್ರಬಂಧ ಹಾಗೂ ವಿವಿಧ ವಿಜ್ಞಾನ ವಿಷಯಗಳ ಮಹತ್ತ್ವದ ಗ್ರಂಥಗಳನ್ನು ಕೊಂಡುಕೊಂಡು ಪುಣೆಯ ಮನೆ ತಲುಪಿದರು.

ಎಂಟು ದಿವಸ ಸತತವಾಗಿ ಓದಿ, ಸಂತೃಪ್ತರಾಗಿ ಧಾರವಾಡಕ್ಕೆ ಮರಳಿದರು. ಎಂ.ಎ. ಪಾಸಾಯಿತು. ಆದರೆ ಯೋಗ್ಯವಾದ ಪ್ರಾಧ್ಯಾಪಕ ವೃತ್ತಿಗಾಗಿ ೧೯೩೫ರಿಂದ ೧೯೪೩ರ ವರೆಗೆ ತೊಳಲಾಡಬೇಕಾಯಿತು. ಹುಬ್ಬಳ್ಳಿಯ ನ್ಯೂ ಇಂಗ್ಲಿಷ್ ಸ್ಕೂಲಿನಲ್ಲಿ ಶಿಕ್ಷಕ ವೃತ್ತಿ ೧ ವರ್ಷ; ಗದಗ ವಿದ್ಯಾದಾನ ಸಮಿತಿಯ ಮುಖ್ಯಾಧ್ಯಾಪಕರಾಗಿ ಒಂದು ವರ್ಷ ಸೇವೆ ಮುಗಿಸಿ ೧೯೪೩ರಲ್ಲಿ ಪುಣೆಯ ಬಿ.ಎಂ.ಸಿ.ಸಿ ಕಾಮರ್ಸ್ ಕಾಲೇಜಿನಲ್ಲಿ ಕನ್ನಡ ವಿಷಯದ ಅರ್ಧಾವಧಿ ಪ್ರಾಧ್ಯಾಪಕರಾಗಿ ಹೋಗಬೇಕಾಯಿತು. ೧೯೩೫ರಿಂದ ೧೯೪೩ರ ವರೆಗೆ ''ಜಯಕರ್ನಾಟಕ'' ಪತ್ರಿಕೆ ಹಾಗೂ ''ಜೀವನ'' ಪತ್ರಿಕೆಯ ಸಂಪಾದಕರು, ಅತ್ಯುತ್ತಮ ಭಾಷಣಕಾರರು, ಕವಿಗಳು ಮತ್ತು ಪ್ರಭಾವಿ ಶೈಲಿಯಲ್ಲಿ ಕಾವ್ಯವಾಚನ ಮಾಡಬಲ್ಲ ಶ್ರೇಷ್ಠವ್ಯಕ್ತಿ ಎಂಬ ಕೀರ್ತಿ ಕರ್ನಾಟಕದಲ್ಲಿ ಹಬ್ಬಿತ್ತು.

೧೯೪೪-೫೬ - ಹನ್ನೆರಡು ವರ್ಷ ಹೊರನಾಡ ಕರ್ನಾಟಕದ ಸೊಲ್ಲಾಪುರದ ಡಿ.ಎ.ವ್ಹಿ ಮಹಾವಿದ್ಯಾಲಯದಲ್ಲಿ ಕನ್ನಡ ವಿಭಾಗದ ಪ್ರಮುಖ ಹಾಗೂ ಪೂರ್ಣಾವಧಿ ಪ್ರಾಧ್ಯಾಪಕ ಎಂಬ

ಸೇವೆ ಸಲ್ಲಿಸುವುದರ ಜೊತೆಗೆ - ಕರ್ನಾಟಕ ಹಾಗೂ ಮಹಾರಾಷ್ಟ್ರವನ್ನು ಪ್ರತಿನಿಧಿಸುವ ಭಾರತೀಯ ಸಾಹಿತ್ಯ ಹಾಗೂ ಸಂಸ್ಕೃತಿಯ ರಾಯಭಾರಿ ಎಂಬ ಪ್ರಖ್ಯಾತಿ ಬೇಂದ್ರೆಯವರದಾಗಿತ್ತು.

ಇದರ ಪರಿಣಾಮವಾಗಿ ಬೇಂದ್ರೆ ೧೯೫೬ ರಿಂದ ೧೯೬೬ - ಹತ್ತು ವರ್ಷ ಧಾರವಾಡ ಆಕಾಶವಾಣಿ ಕೇಂದ್ರದಲ್ಲಿ ಸಾಹಿತ್ಯ ಸಲಹಾಕಾರ ಎಂಬ ವಿಶೇಷ ಸೇವೆ ಸಲ್ಲಿಸಿ, ವಿವಿಧ ಪ್ರಶಸ್ತಿ ಮತ್ತು ಗೌರವ ಪಡೆಯುತ್ತ ೧೯೮೧ರವರೆಗೆ ಕರ್ನಾಟಕದ ಶ್ರೇಷ್ಠಕವಿ, ಚಿಂತಕ, ಸಂಖ್ಯಾಶಾಸ್ತ್ರ ಪ್ರಚಾರಕ ಎಂಬ ಕೀರ್ತಿ ಸಂಪಾದಿಸಿ ೨೬-೧೦-೧೯೮೧ ರಂದು ಮುಂಬೈ ಹರಕಿಸನ್‌ದಾಸ್ ಆಸ್ಪತ್ರೆಯಲ್ಲಿ ಗಾಲ್ ಬ್ಲಾಡರ್ ಸ್ಟೋನ್ ಆಪರೇಶನ್ ಆಗಿಯೂ, ಕೊನೆ ಉಸಿರು ಎಳೆದರು.

ದಿನಕರ್ಮಗಳನ್ನು ಯಥಾಸಾಂಗ ಮುಗಿಸಿ ೧೪ನೆಯ ದಿವಸ ಮುಂಬೈ ಸಮುದ್ರದಲ್ಲಿ ''ನಾನು ಪ್ರತಿದಿವಸ ನಿಮ್ಮ ಸಾಹಿತ್ಯಶ್ರಾದ್ಧವನ್ನೇ ಮಾಡುವೆ; ನಿಮ್ಮ ಆಜ್ಞೆಯಂತೆ ಧಾರವಾಡದ ೧೩, ಶ್ರೀಮಾತಾ - ಕವಿನಿವಾಸದಲ್ಲಿ ''ಅಂಬಿಕಾತನಯದತ್ತ ವೇದಿಕೆ'' ಸ್ಥಾಪಿಸುವೆ (ಈಗ ೨೦೦೩ ರಿಂದ ಅದು ವಸ್ತು-ವಾಸ್ತು-ಸಮುಚ್ಚಯವಾಗಿ, ''ಸಖೀಗೀತ'' ಸ್ತೂಪದೊಂದಿಗೆ ಪ್ರವಾಸಿಗಳ ಪ್ರೇಕ್ಷಣೀಯ ಸ್ಥಳವಾಗಿ ತಲೆ ಎತ್ತಿ ನಿಂತಿದೆ). ಹಾಗೂ ನಿಮ್ಮ ಕೀರ್ತಿ ಈ ಸಮುದ್ರದ ತೆರೆಗಳು ಪಾಶ್ಚಿಮಾತ್ಯ ದೇಶಗಳಲ್ಲಿ ಹಬ್ಬಿಸಲಿ'' ಎಂಬ ಅಭೀಪ್ಸೆಯೊಂದಿಗೆ ಪಿಂಡವನ್ನು ನಾನು ತೇಲಬಿಟ್ಟದ್ದೆ. ಈ ಘಟನೆಗೆ ಈಗ ೨೫ ವರ್ಷ ಮುಗಿದವು.

ಆಕಸ್ಮಿಕವಾಗಿ ಮುಂಬೈ ವಿಶ್ವವಿದ್ಯಾಲಯದ ಕನ್ನಡವಿಭಾಗದ ಮುಖ್ಯಸ್ಥರಾಗಿರುವ ಡಾ|| ವಸಂತಕುಮಾರ ತಾಳ್ತಜೆಯವರಿಂದ ಒಂದು ಮಹತ್ತ್ವ ಆಮಂತ್ರಣದ ಕರೆ ಬಂದಿತು. ಅದು ಹೀಗಿತ್ತು ''ಡಾ|| ಕೆ. ಎಸ್. ಶರ್ಮಾ ಅವರು ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಬೆಳ್ಳಿಹಬ್ಬದ ನಿಮಿತ್ತವಾಗಿ ಹಮ್ಮಿಕೊಂಡಿರುವ - ಬೇಂದ್ರೆ ದತ್ತಿ ಉಪನ್ಯಾಸದ ಮುಖ್ಯ ಅತಿಥಿಗಳಾಗಿ ಆಗಮಿಸಿ ''ಬೇಂದ್ರೆ ಮತ್ತು ವಿಜ್ಞಾನ'' ಕುರಿತು ವಿಶೇಷ ಉಪನ್ಯಾಸ ಕೊಡಬೇಕು. ಡಾ|| ವಾಮನ ಬೇಂದ್ರೆಯವರು ಅಧ್ಯಕ್ಷ ಸ್ಥಾನದಿಂದ ಸಮಾರೋಪ ಭಾಷಣ ಮಾಡಬೇಕು''. ಇದು ದೈವದ ಕರೆ, ನನ್ನ ಕೊನೆಯ ಪ್ರಾರ್ಥನೆಯನ್ನು ಮುಂಬೈ ಸಮುದ್ರರಾಜ ಮನ್ನಿಸಿದ ಕರೆ, ಧಾರವಾಡದ ವರಕವಿ ಬೇಂದ್ರೆ ವಿಶ್ವವಿಜ್ಞಾನಿ ಕವಿ ಎಂದು ಪ್ರಕಟವಾಗಿ ಸಾರುವ ಕರೆ ಎಂದು ಭಾವಿಸಿ ನಾವು ಆಮಂತ್ರಣ ಒಪ್ಪಿಕೊಂಡೆವು.

೨೬-೩-೨೦೦೬ರಲ್ಲಿ ಮುಂಬೈ ವಿಶ್ವವಿದ್ಯಾಲಯದ ಭೌತಶಾಸ್ತ್ರದ ಸಭಾಭವನದಲ್ಲಿ, ಡಾ|| ಶರ್ಮಾ ಅವರು ''ಮಹಾಕವಿ, ಮಹಾವಿಜ್ಞಾನಿ, ಮಹಾಮಾನವ ಬೇಂದ್ರೆಯವರು ಪ್ರೈಮನಂಬರ್ ಥೇರಿ (ಅವಿಭಾಜ್ಯ ಸಂಖ್ಯಾ ಸಿದ್ಧಾಂತ); ಪರಫೆಕ್ಟ್ ನಂಬರ ಥೇರಿ (ಪರಿಪೂರ್ಣ ಸಂಖ್ಯಾ ಸಿದ್ಧಾಂತ); ಮೆಂಡೆಲೀಫ್ ಅವರ ಪೀರಿಯಾಡಿಕ್ ಟೇಬಲ್ (ಮೂಲಭೂತ ರಾಸಾಯನಿಕ ಧಾತುಗಳ ಕೋಷ್ಟಕ) ಹಾಗೂ ವಿಶ್ವವಿಜ್ಞಾನ (ಕಾಸ್‌ಮಾಲಾಜಿ) ಎಂಬ ನಾಕು ವಿಜ್ಞಾನ ಶಾಖೆಗಳಿಗೆ - ಸಲ್ಲಿಸಿದ ಕೊಡುಗೆಗಳನ್ನು ಆಧಾರಸಹಿತ ವಿವರಿಸಿದರು. ಡಾ|| ವಾಮನ ಬೇಂದ್ರೆಯವರು ವಿಶ್ವವಿಜ್ಞಾನಿ ಬೇಂದ್ರೆಯವರು ತಮ್ಮ ಕಾವ್ಯ ಮಾಧ್ಯಮ ಹಾಗೂ

ಸಂಖ್ಯಾಮಾಧ್ಯಮಗಳ ಮೂಲಕ ಜೀವರಸಾಯನ ಶಾಸ್ತ್ರ ಸಿದ್ಧಾಂತಕ್ಕೆ ಸಲ್ಲಿಸಿದ ಅಪೂರ್ವ ಕೊಡುಗೆಯನ್ನು ಉದಾಹರಣೆಗಳೊಂದಿಗೆ ಸಮಾರೋಪ ಭಾಷಣ ಮಾಡಿದರು.

ಬೇಂದ್ರೆಯವರು ೧೯೭೪ರಲ್ಲಿ ಜ್ಞಾನಪೀಠ ಪ್ರಶಸ್ತಿ ಪಡೆದಾಗ ಮಾಡಿದ ವಿಶೇಷ ಉಪನ್ಯಾಸ ಪ್ರಾರಂಭಿಸಿದ್ದರ ಔಚಿತ್ಯ ವಿವರಿಸಿದ್ದು ಹೀಗೆ - ''ಸನ್ಮಾನ್ಯ ಅಧ್ಯಕ್ಷರೆ, ... ಪಂಪ, ಕುಮಾರವ್ಯಾಸ ಎಂಬೀ ಕವಿಗಳಿಗೆ ತವರು ಮನೆಯೆನಿಸಿದ ಧಾರವಾಡ ಸೀಮೆಯವನು ನಾನು. ಪ್ರಥಮ ಮೋಕ್ಷಗಾಮಿ ಎಂದು ಕರೆಯಲ್ಪಡುವ ಬಾಹುಬಲಿ ಗೊಮ್ಮಟನ ಭವ್ಯಶಿಲಾ ಮೂರ್ತಿಗಳನ್ನು ಯಾವ ನಾಡು ಅನೇಕಸಲ ಕಟೆದು ಪ್ರತಿಷ್ಠಾಪಿಸಿದೆಯೋ ಆ ನಾಡಿನವನು ನಾನು. ಭೂಗರ್ಭಶಾಸ್ತ್ರಜ್ಞರು ಈ ಭಾಗಕ್ಕೆ ಧಾರವಾಡ ಪ್ರದೇಶ - ಎಂದು ಕರೆದಿದ್ದಾರೆ. ಈ ಪ್ರದೇಶಕ್ಕೆ ಕನ್ನಡನಾಡು ಕರ್ನಾಟಕ ಎಂದು ಹೆಸರಿಸಿದ್ದು ಅದನ್ನು ಆಂಡಯ್ಯ ಎಂಬ ಕವಿ ತನ್ನ ಪೌರಾಣಿಕ ನೀತಿಕಥಾ ಕಾವ್ಯದಲ್ಲಿ ಸೊಗಸಾಗಿ ಬಣ್ಣಿಸಿದ್ದಾನೆ'' ಎಂದು ಸ್ಮರಿಸುತ್ತ ತಮ್ಮ ಅನಿಸಿಕೆ ಮಂಡಿಸಿದರು. ಧಾರವಾಡದ ಶಿಲೆ-ಪದರುಶಿಲೆ ಅತ್ಯಂತ ಪುರಾತನ ಶಿಲೆ ಎಂದು ಭೂವಿಜ್ಞಾನ ಮನ್ನಿಸಿದೆ. ಧಾರವಾಡ ಪ್ರಾಚೀನ ಕಾಲದ ಪ್ರಮುಖ ನಡುಗಡ್ಡೆ!

ಕಾಲ ಬದಲಾದಂತೆ ಕವಿಯ ದೃಷ್ಟಿ ಕಾವ್ಯಸಿದ್ಧಾಂತಗಳು ಬದಲಾಗಲೇಬೇಕು. ಆದಿಕವಿ ಪಂಪ-ಕವಿ ಮತ್ತು ಕಲಿಯಾಗಿದ್ದನು. ಮಹಾಕವಿ ಕುಮಾರವ್ಯಾಸನು - ಗದುಗಿನ ವೀರನಾರಾಯಣನ ಲಿಪಿಕಾರನಾಗಿ, ಕನ್ನಡ ಕಾವ್ಯದ ಶ್ರೇಷ್ಠ ರೂಪಕ ಚಕ್ರವರ್ತಿಯಾಗಿ ಮೆರೆದನು. ಇಬ್ಬರ ಕಾಲಕ್ಕೂ ಕರ್ನಾಟಕದಲ್ಲಿ ಆಳರಸರ ಆಳುವಿಕೆಯ ಕಾಲವಿತ್ತು, ರಸಿಕ ಸರಸಕವಿ ಮುದ್ದಣ-ನಾರಣಪ್ಪ ಹೊಸಕಾಲದ ಹುಂಜವಾಗಿ ''ಮುದ್ದಣನ ಹುಂಜವೆಕ್ಕೆಕ್ಕಿ ಕೂಗಿದ ಮೇಲೆ'' ಬೇಂದ್ರೆ ಎಂಬ ಹುಟ್ಟುಕವಿ - ಔದುಂಬರ-ದತ್ತೋಪಾಸಕಕವಿ, ತನ್ನ ಜೀವನ ಮಹಾಕಾವ್ಯವಾಗಿರುವ ''ಔದುಂಬರಗಾಥೆ''ಯನ್ನು ಸೃಷ್ಟಿಸಿ, ಹಾಡಿ, ಕರ್ನಾಟಕದ ಜನಪರಕವಿಯಾಗಿ, ಪಂಡಿತ ಮನ್ನಣೆ ಪಡೆದ ಕವಿ! ಹೊಸ ಪ್ರಜ್ಞೆಯ ಈ ಕವಿ ಉತ್ತರಕರ್ನಾಟಕದ ನವೋದಯ ಕಾವ್ಯದ ಆದಿಕವಿಯಾಗಿ ಮೆರೆದದ್ದು ಅವನ ಕಾವ್ಯದ ಹಿರಿಮೆಯಲ್ಲದೆ ಮತ್ತೇನು?

ಪಂಪ, ಕುಮಾರವ್ಯಾಸ, ಮುದ್ದಣರ ಕಾಲಕ್ಕೆ ಯುದ್ಧ, ದುಷ್ಟಸಂಹಾರ, ಶಿಷ್ಟ ಪ್ರತಿಪಾಲನ, ಭಾರತೀಯ ಸಂಸ್ಕೃತಿಯ ರಕ್ಷಣೆ ಕವಿ ಎದುರಿಸುವ ಪ್ರಮುಖ ಸಮಸ್ಯೆಗಳಾಗಿದ್ದವು. ಯುದ್ಧವೀರರಿಗೆ ವೈರದ ದೀಕ್ಷೆಕೊಟ್ಟು ಗೆಲವನ್ನು ಪಡೆಯಲು, ಸಾಮ್ರಾಜ್ಯ ವಿಸ್ತರಿಸಲು ಪ್ರೇರಣೆ ಕೊಡುವುದೇ ಪ್ರಮುಖ ಕರ್ತವ್ಯವಾಗಿತ್ತು, ಆಗಿನ ಸ್ವಾತಂತ್ರ್ಯ ಹಾಗೂ ಪಾರತಂತ್ರ್ಯಗಳು ಸ್ವದೇಶದ ಆಳರಸರ ಅಹಂಕಾರ ಮತ್ತು ಪ್ರತಿಷ್ಠೆಗೆ ಸೀಮಿತವಾಗಿದ್ದವು. ರಕ್ತಹರಿಸುವಿಕೆ, 'ಸ್ವಧರ್ಮೇ ನಿಧನಂ ಶ್ರೇಯಃ' ಆದರ್ಶಗಳಾಗಿದ್ದವು.

ಬೇಂದ್ರೆ ಜನಿಸಿದ ಕಾಲವನ್ನು ''ಈ ಶತಕ ಬಂದಿಲ್ಲ, ಆ ಶತಕ ಮುಗಿದಿಲ್ಲ! ಕೊನೆ ದಶಕ ಕೊನೆಕೊನೆಗೆ ಅದೆ ಬಂದಿದೆ। ವಿಜ್ಞಾನಿಗಳ ದೃಷ್ಟಿ ಸೃಷ್ಟಿಗರ್ಭದೊಳಾಗ। ರೇಡಿಯಮ್ಮಿನ ಕಿರಣವನು ಕಂಡಿದೆ॥ ಗಂಟುಬೇನೆಯ ವ್ಯಾಧಿ ತುಂಟತನದೊಳಗ। ಬಾಲಲೀಲೆಯೊಳಿತ್ತು ಎಲ್ಲೆಲ್ಲಿಯೂ॥ ರಾಷ್ಟ್ರೀಯ ಚಳುವಳಿ ಕುಂಟುತ್ತ ನಡೆದಿತ್ತು। ಕಂಡವರು ಎಂಬವರು

ಹಿಂಬಾಲಕರು॥ ಹಾಗೂ ರಾಣಿಯ ರಾಜ್ಯದ ಕನಸಿದೆ ಹರಿದಿತ್ತು। ಬೀಜ ಸ್ವರಾಜ್ಯಕ್ಕೆ ಮೊಳೆ ಬಂದಿತ್ತು॥ ಅಂಬಿಕೆ ಎಂಬವಳ ಹೃದಯಾಂಬರದಲ್ಲಿ ತತ್ತಿಯನ್ನಿಟ್ಟಿತ್ತು ನವಮೇಘವು ॥'' ಎಂದು ಬೇಂದ್ರೆಯವರು ೧೯೭೩ರಲ್ಲಿ ಸಿಂಹಾವಲೋಕನ ಕ್ರಮದಿಂದ ವರ್ಣಿಸಿದ್ದಾರೆ. ಶಾಂತಿ ಹಾಗೂ ಅಹಿಂಸೆ ಎಂಬ ಆಯುಧಗಳಿಂದ ಒಕ್ಕಟ್ಟಿನಿಂದ ಪರಕೀಯರು ಅಪಹರಿಸಿದ ಸ್ವಾತಂತ್ರ್ಯ ಮರಳಿ ಪಡೆಯುವುದು, ಪರದಾಸ್ಯದಿಂದ ಮುಕ್ತರಾಗುವ ಕನಸು, ಆದರ್ಶವಿದ್ದಾಗ ಬೇಂದ್ರೆ ಹುಟ್ಟಿಬೆಳೆದದ್ದು. ಸ್ವಾತಂತ್ರ್ಯ ಹೋರಾಟ ಹಾಗೂ ದಾಸ್ಯ ವಿಮೋಚನೆಯೇ ಈ ಕವಿಯ ದೃಷ್ಟಿಕೋನವಾಗಿತ್ತು, ಪರಕೀಯರ ತುಪಾಕಿ, ಮದ್ದುಗುಂಡುಗಳ ದಾಳಿಯನ್ನು ಎದುರಿಸಲಾರದೆ ಭದ್ರವಾದ ಕೋಟೆಗಳು ಉರುಳಿದವು. ಸ್ವಕೀಯರೇ ವಿಶ್ವಾಸಘಾತ ಮಾಡುವವರಾದರು. ವಂಶಜರಿಲ್ಲದ ಸಂಸ್ಥಾನಿಕರು ಪರಕೀಯರಿಗೆ ಸಂಸ್ಥಾನ ಒಪ್ಪಿಸಬೇಕಾಯಿತು. ಹೀಗಾಗಿ ಆ ಕಾಲದ ಕವಿಗೆ ಪಾಶ್ಚಿಮಾತ್ಯ ದೇಶದ ವಿಜ್ಞಾನ ಶಾಖೆಗಳ ಅಭ್ಯಾಸಮಾಡುವ ಸವಾಲು ಎದುರಿಸುವ ಪರಿಸ್ಥಿತಿ ಉಂಟಾಗುತ್ತದೆ. ಇದು ಬೇಂದ್ರೆ ಕಾವ್ಯ ಎದುರಿಸಿದ ಪ್ರಮುಖ ಪ್ರಶ್ನೆ. ಬೇಂದ್ರೆ ಧೈರ್ಯ ಮಾರ್ಗದ ಬೆಂಬಲಿಗರು. ವೀರಮಾರ್ಗದ ವಿರೋಧಿಗಳು. ''ಮಾವಿದ್ವಿಷಾವಹೈ'' ಮಂತ್ರದ ಪ್ರತಿಪಾದಕರು. ಪುರುಷರ ಹಾಗೂ ಸ್ತ್ರೀಯರ ರಕ್ತದಲ್ಲಿ ವೈರದ ಬೀಜ ನಿರ್ನಾಮಮಾಡಿ, ಸಾಮರಸ್ಯದ ಬಿತ್ತಿಗೆಯನ್ನು ಬಯಸಿದ ಮಹಾತತ್ತ್ವಜ್ಞಾನಿ ಬೇಂದ್ರೆ, ತನ್ನ ಕಾವ್ಯದ ಒಂದು ಘಟಕ ವಿಜ್ಞಾನ ಚಿಂತನೆಗೆ ಹಾಗೂ ರೂಪಸೃಷ್ಟಿಗಾಗಿ ಮೀಸಲಾಗಿಟ್ಟರು. ಇದೇ ಬೇಂದ್ರೆ ವೈಜ್ಞಾನಿಕ ಕವನಗಳ ಅಡಿಗಲ್ಲು ಎಂಬುದು ನಾ ಕಂಡ ಸತ್ಯ.

ಹುಬ್ಬಳ್ಳಿ
೧೬-೪-೨೦೦೬

- ಡಾ॥ ವಾಮನ ಬೇಂದ್ರೆ
ಸಹ-ನಿರ್ದೇಶಕರು, ಬೇಂದ್ರೆ ಸಂಶೋಧನ ಸಂಸ್ಥೆ

*ಬೇಂದ್ರೆ ಮತ್ತು ವಿಜ್ಞಾನ

● ಡಾ|| ಕೆ. ಎಸ್. ಶರ್ಮಾ

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು ಮಹಾಕವಿ ಎಂದು ಸುಪರಿಚಿತರು. ಆದರೆ ಈ ವಾಮನಮೂರ್ತಿ ದತ್ತಾತ್ರೇಯರು ವಿರಾಟ್ ಸ್ವರೂಪರು, ಇವರು ಮಹಾವಿಜ್ಞಾನಿಯಾಗಿದ್ದರು ಎಂಬ ದರ್ಶನ ಅನೇಕರಿಗೆ ಅಪರಿಚಿತವಾದ ವಿಷಯ. ಮಹಾಕವಿ ಬೇಂದ್ರೆ ಮಹಾವಿಜ್ಞಾನಿಗಳಾಗಿ ಇದ್ದುದಲ್ಲದೆ, ತತ್ತ್ವಜ್ಞಾನಿಗಳಾದ ಮಹಾಮಾನವರಾಗಿದ್ದು, ನವಮಾನವ ಆವಿರ್ಭಾವಕ್ಕಾಗಿ ಸಾಹಿತ್ಯ-ವಿಜ್ಞಾನ ಯೋಗವನ್ನು ನಡೆಸಿದ ಅಪೂರ್ವ ಮೇಧಾವಿ-ರಸಋಷಿ, ಭಾವಋಷಿ.

ಕವಿಗಳಿರುತ್ತಾರೆ, ಕವಿಗಳ ಕವಿಗಳು ವಿರಳ; ವಿಜ್ಞಾನಿಗಳಿರುತ್ತಾರೆ, ವಿಜ್ಞಾನಿಗಳ ವಿಜ್ಞಾನಿಗಳು ವಿರಳ. ಮಹಾಕವಿ-ಮಹಾವಿಜ್ಞಾನಿ-ಮಹಾತತ್ವಜ್ಞಾನಿ ಎಂಬೀ ತ್ರಿಮುಖಗಳನ್ನು ಪಡೆದಿದ್ದ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಓರ್ವ ಯುಗಪ್ರವರ್ತಕರು. ಈ ಮಹಾಮಹಿಮನ ವಿಜ್ಞಾನ ಮುಖದರ್ಶನವನ್ನು ಮುಂಬೈಯ ಬೇಂದ್ರೆ ಅಭಿಮಾನಿಗಳಿಗೆ ಮಾಡಿಸುವ ಸಾಹಸಕ್ಕೆ ಕೈಹಾಕಿದ್ದೇನೆ. ''ಬೇಂದ್ರೆ ವಿಜ್ಞಾನ ಸಿದ್ಧಾಂತ-ಪ್ರಯೋಗ'' ವಿಷಯ ಕುರಿತಾದ ಈ ಭಾಷಣವನ್ನು ಸಂಖ್ಯಾಶಾಸ್ತ್ರ-ರಸಾಯನಶಾಸ್ತ್ರ-ವಿಶ್ವಶಾಸ್ತ್ರಗಳ ತ್ರಿವಳಿಯ ಮೂಲಕ ಸಾದರಪಡಿಸಬಯಸುತ್ತೇನೆ. ಈ ಪರಿಚಯವನ್ನು ಪ್ರಾರಂಭ ಮಾಡುವ ಪೂರ್ವದಲ್ಲಿ ಒಂದು ಮಹತ್ವದ ಸಂಗತಿಯನ್ನು ತಮಗೆ ತಿಳಿಸಬಯಸುವೆ. ದ. ರಾ. ಬೇಂದ್ರೆಯವರ ವೈಯಕ್ತಿಕ ಗ್ರಂಥಭಂಡಾರದಲ್ಲಿ ೧೬,೦೦೦ ಗ್ರಂಥಗಳಿವೆ. ಅವುಗಳು ೧೦೨ ವಿಷಯಗಳಿಗೆ ಸೇರಿದವುಗಳಾಗಿದ್ದು ವೇದ-ಉಪನಿಷತ್-ಪುರಾಣಗಳಿಂದ ಹಿಡಿದು ಆಧುನಿಕ ವಿಜ್ಞಾನಗಳಾದ ಅಣುಶಾಸ್ತ್ರ-ಭೌತಶಾಸ್ತ್ರ-ರಸಾಯನಶಾಸ್ತ್ರಗಳವರೆಗೆ ಅಡಕವಾಗಿವೆ. ಇವುಗಳಲ್ಲಿ ಅನೇಕ ಕೃತಿಗಳಲ್ಲಿ ಬೇಂದ್ರೆ ಕವನಗಳನ್ನು ಬರೆದಿರುವಂತೆ,

*ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಆಶ್ರಯದಲ್ಲಿ ರಜತ ಮಹೋತ್ಸವ ವರ್ಷದಲ್ಲಿ ಏರ್ಪಡಿಸಿದ ''ದ. ರಾ. ಬೇಂದ್ರೆ ದತ್ತಿ ಉಪನ್ಯಾಸ'' - ೨೬-೩-೨೦೦೬

ಸಂಖ್ಯಾಶಾಸ್ತ್ರದ ಟಿಪ್ಪಣಿಗಳು, ವೈಜ್ಞಾನಿಕ ಚಿಂತನೆಗಳ ಟಿಪ್ಪಣಿಗಳಿವೆ. ಇಂಗ್ಲೀಷ್, ಸಂಸ್ಕೃತ, ಕನ್ನಡ, ಹಿಂದಿ, ಮರಾಠಿ ಭಾಷೆಗಳಲ್ಲಿ ಅಪೂರ್ವ ಕೃತಿಗಳಿವೆ. ಈ ಕುರಿತು ಪ್ರಸ್ತಾಪಮಾಡಲು ಕಾರಣವೆಂದರೆ, ಬೇಂದ್ರೆ ಅಧ್ಯಯನದ ಅಗಾಧತೆಯ ಕಲ್ಪನೆ ನಿಮಗೆ ಬರಲಿ ಎಂದು.

ಈ ಪೂರ್ವಪೀಠಿಕೆಯೊಡನೆ ಬೇಂದ್ರೆ ವಿಜ್ಞಾನದ ವಿಸ್ಮಯ ಪ್ರಪಂಚವನ್ನು ಪ್ರವೇಶಿಸೋಣ.

ಎಲ್ಲರಿಗೂ ನಮಸ್ಕಾರ. ಇದೇನು ಭಾಷಣ ಪ್ರಾರಂಭಿಸುವ ಮೊದಲು ಎಲ್ಲರಿಗೂ ನಮಸ್ಕಾರ ಮಾಡುವ ಪರಂಪರೆಯನ್ನು ಬಿಟ್ಟು ಈಗ, ನಮಸ್ಕಾರ ಮಾಡುತ್ತಿದ್ದಾನಲ್ಲ ಎಂದು ತಪ್ಪುಗ್ರಹಿಸಬೇಡಿ. ಬೇಂದ್ರೆ ಸಂಖ್ಯಾಶಾಸ್ತ್ರವನ್ನು ಅವರ ''ನಮಸ್ಕಾರ ಮುದ್ರಾ''ದ ಪರಿಚಯದಿಂದ ಪ್ರಾರಂಭಮಾಡುವೆ.

''ಎಲ್ಲರಿಗೂ ಎರಡು ಕೈಗಳಿವೆ, ಹತ್ತು ಬೆರಳುಗಳಿವೆ. (ಅಪವಾದ ಬಿಟ್ಟು). ಕೈಬೆರಳು ಜೋಡಿಸಿ ನಮಸ್ಕಾರ ಮುದ್ರೆ ಮಾಡಿದಾಗ ಒಂದು ಅದ್ವಿತೀಯ ವಿಶಿಷ್ಟ ಯೋಜನೆ ಆಗುವದು. ಕನಿಷ್ಟಿಕಾ (ಕಿರಿಬೆರಳು), ಅನಾಮಿಕಾ, ಮಾಧ್ಯಮಾ, ತರ್ಜನಿ, ಅಂಗುಷ್ಠ (ಹೆಬ್ಬರಳು) ಇವುಗಳಿಗೆ ೧, ೨, ೩, ೪, ೫ ಈ ಕ್ರಮವನ್ನು ಕೊಟ್ಟು, ಮುಂದೆ ಎಡಗೈ ಹೆಬ್ಬರಳಿನಿಂದ ಕಿರಿಬೆರಳಿನವರೆಗೆ ೬, ೭, ೮, ೯, ೧೦ ಈ ಕ್ರಮಪ್ರಾಪ್ತ ಅಂಕಿಗಳನ್ನು ಹಾಕಿದರೆ - ನಮಸ್ಕಾರ ಮುದ್ರೆ ಮಾಡಿದಾಗ, ಹತ್ತಿಕೊಂಡ ಒಂದೊಂದು ಜೊತೆಗೂ ಹನ್ನೊಂದು ಎಂಬ ರುದ್ರ ಸಂಖ್ಯೆ ಬರುತ್ತದೆ. ಈ ಜೋಡಿಗಳಲ್ಲಿ ಒಂದು ವಿಭಾಜ್ಯ ಒಂದು ಅವಿಭಾಜ್ಯ ಇರುವುದೇ ಇಲ್ಲಿಯ ವಿಶೇಷವಾಗಿದೆ. ಹನ್ನೊಂದು ಈ ಸಂಖ್ಯೆಯು ಅವಿಭಾಜ್ಯವೇ ಆಗಿದೆ. ಹೀಗೆ ಐದಕ್ಕೆ ಐದು ಕೂಡಿದಾಗ ಹತ್ತು ಆಗುವುದಲ್ಲದೆ ೫೫ ಮೊತ್ತವೂ ಆಗುತ್ತದೆ. ಈ ನಮಸ್ಕಾರ ಮುದ್ರೆಯು ಅವಿಭಕ್ತ ಸತ್ತ್ವವನ್ನು ಕೊಟ್ಟು ಕಲಿಯ ಕಲಹದಿಂದ ಬಿಡಿಸಿ, ನವಕೃತ ಯುಗಕ್ಕೆ ಒಯ್ಯುವ ಹಯಾರೂಢ ಕಲ್ಕಿಯಾಗುತ್ತದೆ. ಇದು ನವಕಲ್ಪದ ಕಲ್ಪಿ; ಋಷಿ ಕವಿಗಳ ಕಲ್ಪಿ. ಇದು ಕ್ರಾಂತಿ ಧರ್ಮದ ಸತ್‌ಪಥವಾಗಿದೆ''.

ಬೇಂದ್ರೆಯವರು ಸಂಖ್ಯಾಶಾಸ್ತ್ರವನ್ನು ಅತ್ಯಂತ ಆಳವಾಗಿ ಅಭ್ಯಾಸಮಾಡಿದ್ದರು. ಇವರ ಅಭ್ಯಾಸದ ಪರಿಚಯವನ್ನು ಕೇವಲ ಮೂರು ಅಂಗಗಳ ಮೂಲಕ ವಿವರಿಸಬಯಸುತ್ತೇನೆ. ಅವುಗಳೆಂದರೆ - (೧) ಪ್ರೈಮ್ ನಂಬರ್ಸ್, (೨) ಪರ್‌ಪೆಕ್ಟ್ ನಂಬರ್ಸ್ ಹಾಗೂ (೩) (ಪೈ).

ಈಗಾಗಲೇ ''ನಮಸ್ಕಾರ ಮುದ್ರಾ''ದ ಪರಿಚಯ ಮಾಡುವಾಗ ಅವಿಭಕ್ತ ಸಂಖ್ಯೆಗಳ ಕುರಿತು ಸೂಕ್ಷ್ಮವಾಗಿ ತಿಳಿಸಲಾಗಿದೆ. ಈ ಕುರಿತು ಸಂಖ್ಯಾಶಾಸ್ತ್ರದಲ್ಲಿ ಯಾವ ರೀತಿಯ ಪ್ರತಿಪಾದನೆ ಇದೆ ಎಂದು ಪರಿಶೀಲಿಸಿ, ನಂತರ ಬೇಂದ್ರೆ ಪ್ರೈಮ್ ನಂಬರ್ಸ್‌ಗೆ ಬರೋಣ.

ಸಂಖ್ಯಾಶಾಸ್ತ್ರದಲ್ಲಿ ಅನೇಕ ಥಿಯೆರಿಗಳಿವೆ, ಅವುಗಳಲ್ಲಿ ಕೆಲವನ್ನು ಉದಾಹರಿಸಬಯಸುವೆ. ಫ್ರ್ಯಾಕ್ಷನ್ ಥಿಯರಿ, ಥಿಯರಿ ಆಫ್ ಸರ್‌ಡ್ಸ್, ಥಿಯರಿ ಆಫ್ ನೆಗಟಿವ್ ನಂಬರ್ಸ್, ಥಿಯರಿ ಆಫ್ (ಪೈ), ಪ್ರೈಮ್ ನಂಬರ್ ಥಿಯರಿ, ಫರ್‌ಫೆಕ್ಟ್ ನಂಬರ್ ಥಿಯರಿ, ಗೋಲ್ಡ್‌ಭಾಷ್

ಕನ್‌ಜೆಕ್ಚರ್ ಥಿಯರಿ ಕ್ರಿಪ್ಟಾಲಜಿ ಮುಂತಾಗಿ. ಈ ಎಲ್ಲ ಸಂಖ್ಯಾಶಾಸ್ತ್ರ ಥಿಯರಿಗಳ ಪೈಕಿ ಬೇಂದ್ರೆಯವರು ತಮ್ಮ ಚಿಂತನೆ ಹಾಗೂ ಸಂಶೋಧನೆಗೆ ಮೂರು ಥಿಯರಿಗಳನ್ನು ವಿಶೇಷವಾಗಿ ಆಯ್ಕೆಮಾಡಿಕೊಂಡಿದ್ದರು. ಅವೆಂದರೆ ಪ್ರೈಮ್ ನಂಬರ್ ಥಿಯರಿ, ಪರ್‌ಫೆಕ್ಟ್ ನಂಬರ್ ಥಿಯರಿ ಹಾಗೂ ಪೈ ಥಿಯರಿ. ಈ ರೀತಿಯಾಗಿ ಆಯ್ಕೆಮಾಡಿಕೊಳ್ಳಲು ಕಾರಣವಾದರೂ ಏನು? ಎಂಬುದು ಗಮನಾರ್ಹ ವಿಷಯ. ಈ ಆಯ್ಕೆಯ ಅಂತರಾಳವನ್ನು ಅರಿತಾಗ ಬೇಂದ್ರೆಯವರು ಕೇವಲ ಸಂಖ್ಯಾಶಾಸ್ತ್ರ ಸಂಶೋಧಕರಾಗಿರಲಿಲ್ಲ, ಅವರು ತತ್ತ್ವಜ್ಞಾನಿಗಳಾಗಿದ್ದರು; ಅವರ ಚಿಂತನೆಯು ಕೇವಲ ಸಂಖ್ಯೆಗಳನ್ನು ಸಂಖ್ಯೆಗಳಿಗಾಗಿ ಅಭ್ಯಾಸಮಾಡುವುದಾಗಿರದೆ, ಸಂಖ್ಯೆಗಳನ್ನು ನವಮಾನವ ಆವಿರ್ಭಾವದ ಉಪಕರಣವಾಗಿ ಬಳಸುವುದಾಗಿತ್ತು ಎಂದು ತಿಳಿಯುತ್ತದೆ.

''ಗ್ರೋಲಿಯರ್ ಎನ್‌ಸೈಕ್ಲೋಪೀಡಿಯಾ''ದಲ್ಲಿ ಹೇಳಿರುವಂತೆ, ಪ್ರೈಮ್ ನಂಬರ್ಸ್ ಬಗ್ಗೆ ಗ್ರೀಸ್‌ದ ಪೈಥಾಗರಸ್‌ನ ಅನುಯಾಯಿಗಳು, ಅಲೆಕ್ಸಾಂಡ್ರಿಯಾದ ಡಯೋಫಾಂಟಸ್, ಭಾರತದ ಬ್ರಹ್ಮಗುಪ್ತ ಹಾಗೂ ಆರ್ಯಭಟ ಇವರು ಅಧ್ಯಯನ ಮಾಡಿದ್ದರು. ಯೂಕ್ಲಿಡ್ ತನ್ನ ''ಎಲಿಮೆಂಟ್ಸ್'' ಎಂಬ ಕೃತಿಯಲ್ಲಿ ಕ್ರಿ.ಪೂ. ೩೦೦ರಲ್ಲಿ ಪ್ರೈಮ್ ನಂಬರ್‌ನ ಗುಣವಿಶೇಷದ ಬಗ್ಗೆ ಹೀಗೆಂದು ಹೇಳಿದ್ದ : "A Prime Number being one whose only positive divisors are itself and 1. Any whole number greater than 1 is either a Prime or a product of Primes. The Prime factors of a number are unique and this constitutes the Fundamental theorem of Arithmetic" ಎಂದು.

ಬೇಂದ್ರೆಯವರು ಪ್ರೈಮ್ ನಂಬರ್ಸ್‌ಗೆ ಅವಿಭಕ್ತ ಸಂಖ್ಯೆಗಳು ಎಂದು ಬಣ್ಣಿಸುವುದರೊಡನೆ, ಅವುಗಳನ್ನು ''ದೇವ ಸಂಖ್ಯೆ''ಗಳೆಂದೂ, ನಾನ್-ಪ್ರೈಮ್ ಸಂಖ್ಯೆಗಳನ್ನು ವಿಭಕ್ತ ಸಂಖ್ಯೆಗಳು ಎಂದು ಬಣ್ಣಿಸುವುದರೊಡನೆ ಅವುಗಳನ್ನು ''ರಾಕ್ಷಸ ಸಂಖ್ಯೆ''ಗಳು ಎಂದು ಬಣ್ಣಿಸಿದ್ದರು. ಕಂಪ್ಯೂಟರ್‌ಗಳು ಬಳಕೆಗೆ ಬರುವ ಪೂರ್ವದಲ್ಲೇ ಬೇಂದ್ರೆಯವರು ಸಾವಿರಾರು ದೇವ ಸಂಖ್ಯೆಗಳನ್ನು ಗುರುತಿಸಿದ್ದರು. ಈ ಸಂದರ್ಭದಲ್ಲಿ ಒಂದು ಘಟನೆಯನ್ನು ಪ್ರಸ್ತಾಪಿಸುವುದು ಉಚಿತವಾಗುತ್ತದೆ. ಅದು ಬೇಂದ್ರೆಯವರು ಇಪ್ಪತ್ತೈದು ವರುಷಗಳ ಹಿಂದೆ ಮುಂಬೈಗೆ ಭೇಟಿಕೊಟ್ಟಾಗ, ಇಲ್ಲಿಯ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್‌ದ ನಿರ್ದೇಶಕರನ್ನು ಆಗ ಅಲ್ಲಿ ಗ್ರಂಥಪಾಲರಾಗಿದ್ದ ಶ್ರೀನಿವಾಸ ಹವನೂರ್ ಭೇಟಿಮಾಡಿಸಿದ್ದರು. ಆಗ ಏಕಾಏಕಿಯಾಗಿ ಬೇಂದ್ರೆಯವರು ಒಂದು ಸುದೀರ್ಘ ಅಂಕಿಯನ್ನು ಕೊಟ್ಟು, ಇದನ್ನು ನಾನು ''ಪ್ರೈಮ್ ನಂಬರ್'' ಎಂದು ಗುರುತಿಸಿದ್ದೇನೆ. ಇದನ್ನು ನೀವು ನಿಮ್ಮ ಪದ್ಧತಿಯಲ್ಲಿ ಪರೀಕ್ಷಿಸಿ ತಿಳಿಸಿ ಎಂದು ಹೇಳಿದ್ದರಂತೆ. ಅವರು ತಮ್ಮ ಸಂಸ್ಥೆಯ ತಜ್ಞರನ್ನು ಕರೆಯಿಸಿ ಆ ಸಂಖ್ಯೆಯ ಕುರಿತು ಅಭಿಮತ ಕೊಡಲು ಒಪ್ಪಿಸಿದರಂತೆ. ಅವರು ಅರ್ಧಗಂಟೆ ಲೆಕ್ಕಹಾಕಿದ ನಂತರ ''ಹೌದು, ಇದು ಪ್ರೈಮ್ ನಂಬರ್'' ಎಂದು ಹೇಳಿದರಂತೆ. ಬೇಂದ್ರೆಯವರು ಪ್ರೈಮ್ ನಂಬರ್ಸ್‌ದಲ್ಲಿ ಅತ್ಯಂತ ಆಳವಾದ ಅಧ್ಯಯನಮಾಡಿ ಈ ಸಂಖ್ಯೆಗಳನ್ನು ತಕ್ಷಣ ಕಂಡುಹಿಡಿಯಲು ಒಂದು ಸೂತ್ರವನ್ನು ಕಂಡುಹಿಡಿದಿದ್ದರೂ ಕೂಡ. ಅನೇಕ ವರುಷಗಳು ಆದನಂತರ, ಬೇಂದ್ರೆಯವರ ಮೊಮ್ಮಗ ಪ್ರಭಾಕರ ಕಂಪ್ಯೂಟರ್ ಸೈನ್‌ಟಿಸ್ಟ್ ಆದ. ಅವನು ಬೇಂದ್ರೆ ಸೂತ್ರವನ್ನು ಕಂಪ್ಯೂಟರ್ ಮೇಲೆ ಹಾಕಿ, ಅನೇಕ ಪ್ರೈಮ್ ನಂಬರ್ಸ್ ಅದರ ಆಧಾರದ ಮೇಲೆ ತೆಗೆದು, ಬೇಂದ್ರೆ ಅಜ್ಜನ

ಸೂತ್ರ ವಿಜ್ಞಾನ ಪ್ರಮಾಣವಾಗಿತ್ತೆಂದು ದೃಢೀಕರಣ ಮಾಡಿದ್ದ. ಅತ್ಯಂತ ಪ್ರಮುಖವಾಗಿ ಗುರುತಿಸಬೇಕಾದ ಅಂಶವೆಂದರೆ, ಬೇಂದ್ರೆಯವರನ್ನು ಪ್ರೈಮ್ ನಂಬರ್‌ದ ಅವಿಭಾಜ್ಯ ಗುಣಧರ್ಮ ಆಕರ್ಷಿಸಿತ್ತು. ಮಾನವರಲ್ಲಿ ಈ ಅವಿಭಾಜ್ಯ ಗುಣ ಒಳಮೂಡಿದರೆ, ಇದರಿಂದ ನವಮಾನವ ಆವಿರ್ಭಾವವು ಸಾಧ್ಯ ಎಂಬ ಪ್ರೇರಣೆ ಅವರದಾಗಿತ್ತು. ಇದು ಅವರ ತತ್ತ್ವಜ್ಞಾನ ದೃಷ್ಟಿಕೋನ.

ಇನ್ನು "ಪರಫೆಕ್ಟ್ ನಂಬರ್ಸ್" ಬಗ್ಗೆ ಬೇಂದ್ರೆ ಚಿಂತನೆಯನ್ನು ತಿಳಿದುಕೊಳ್ಳೋಣ. ಪರ್‌ಫೆಕ್ಟ್ ನಂಬರ್‌ದ ಉಲ್ಲೇಖವನ್ನು ಎನ್‌ಸೈಕ್ಲೊಪಿಡಿಯಾ ಈ ಕೆಳಗಿನಂತೆ ಮಾಡುತ್ತದೆ.

"The pythogeans called a number perfect if it is the sums of its proper divisors, that is the divisors smaller than itself.

(Eg) 6=3+2+1.

Euclid devised a method for finding Perfect Numbers; If a number n produces a Prime Via the formula 2^{n+1}-1, it will produce a perfect Number via the formula (2^{n+1}-1) (2n).

When n=2, the formula yields, respectively the Prime Number 7 and Perfect Number 28".

There are very large Perfect Numbers that are even. It is not known whether there are any large perfect numbers that are odd. Many fascinating perobleṁs concerning Prime Numbers remain unsolved to-day' ಎಂದಿದೆ.

ಅಂತೆಯೇ ಬೇಂದ್ರೆಯವರು odd perfect numbers ಶೋಧದಲ್ಲಿ ತೊಡಗಿದ್ದರು. ಪ್ರೈಮ್ ನಂಬರ್‌ಗಳನ್ನು ಆವರಿಸಿದ್ದ ರಹಸ್ಯಗಳನ್ನು ಭೇದಿಸುವಲ್ಲಿ ತೊಡಗಿದ್ದರು. ಇದಕ್ಕೆ ಕಾರಣವೆಂದರೆ Perfect Numbers ಇವು ಪೂರ್ಣ ಸಂಖ್ಯೆಗಳು. ಇವು ಮಾನವನ ಪೂರ್ಣತೆಯ ರಹಸ್ಯವನ್ನು ಭೇದಿಸಲು ಸಹಕಾರಿಯಾಗುತ್ತವೆ ಎಂದು. "೨೮" ಬೇಂದ್ರೆಯವರ ಚಿಂತನೆಯ ಸಂಖ್ಯೆಯಾಗಿತ್ತು. ೨+೮=೧೦; ಇದು ಪೂರ್ಣತೆಯ ಸಂಕೇತವಾಗಿತ್ತು. ಹೀಗಾಗಿ ಈ ಕುರಿತು ಚಿಂತನೆಯನ್ನು ಮಾಡುವಾಗ ಕೂಡ ಬೇಂದ್ರೆಯವರ ತತ್ತ್ವಜ್ಞಾನ ದೃಷ್ಟಿ ಮಾನವನ ಪರಿಪೂರ್ಣತೆಯ ಸಿದ್ಧಿ.

ಇಲ್ಲಿ ಬೇಂದ್ರೆಯವರು ೧ ರಿಂದ ೧೦ ಚಿಂತನೆ ಕುರಿತು ತೋರಿದ್ದ ನವಶೋಧವನ್ನು ಉದಹರಿಸಬಯಸುತ್ತೇನೆ.

೧, ೨, ೩, ೪, ೫, ೬, ೭, ೮, ೯, ೧೦ ಈ Number Sequence ದಲ್ಲಿ 1x2x3x4x5x6|7|8x9x10 ಎಂದು ಮಾಡಿದಾಗ ಕಂಡುಬರುವ ವಿಸ್ಮಯವೆಂದರೆ-

೭೨೦।೭।೭೨೦.

ಏಳರ ಅಂಕಿ ಮಧ್ಯೆ ಉಳಿದು ಈ ಕಡೆ ಹಾಗೂ ಆ ಕಡೆಯ product 720 ಹಾಗೂ ೭೨೦ ಆಗುವುದು. ಇದೇ ವರುಷದ ರಾತ್ರಿ ಹಾಗೂ ಹಗಲು. ೩೬೦+೩೬೦=೭೨೦. ಇದಲ್ಲದೆ, ಮಧ್ಯೆ ಇದ್ದ ೭, ಇದೇ ವಾರದ ೭ ದಿನಗಳು. ಇದೇ ಬೆಳಕಿನಲ್ಲಿ ಅಡಗಿರುವ ಸಪ್ತವರ್ಣಗಳು; ಇದೇ ಸಂಗೀತದ, ಸ, ರಿ, ಗ, ಮ, ಪ, ದ, ನಿ - ಏಳು "ಸ್ವರ"ಗಳು. ಈ ಚಿಂತನೆಯಲ್ಲಿ ಎಂಥ ಹೊಸ ಬೆಳಕು ಮೂಡಿದೆ!

ಇನ್ನು ಸಂಖ್ಯಾಶಾಸ್ತ್ರದ p (ಪೈ) ಕುರಿತು ಪ್ರಸ್ತಾಪಿಸೋಣ : Encyclopedia ಹೇಳುವಂತೆ:

"Another mysterious number arose naturally; namely p(Pi); the ratio of the circumference of a circle to its diameter .... The Greeks were unable to decide if p was rational or not .... It was later proved that p was a TRANSCENDENTAL NUMBER'

ಬೇಂದ್ರೆಯವರಿಗೆ p ಅತ್ಯಂತ ಮಹತ್ವದ ಚಿಂತನೆಯ ವಿಷಯವಾಗಿತ್ತು.

"p constantಈ ನಿಯತ ಸಂಖ್ಯೆ ೨೨/೭. ವೈದಿಕ ವಿಷ್ಣುಸೂಕ್ತದಲ್ಲಿ ತ್ರಿವಿಕ್ರಮ ಶಿಪಿವಿಷ್ಟ ಎಂಬ ಸಂಕೇತದಿಂದ ಅದು ಹೇಳಲಾಗಿದೆ" ಎಂದು ಬೇಂದ್ರೆ ಉಲ್ಲೇಖಿಸಿದ್ದಾರೆ. ಅತ್ಯಂತ ಸ್ವಾರಸ್ಯಕರ ವಿಷಯವೆಂದರೆ - p ಬಗ್ಗೆ ಬೇಂದ್ರೆಯವರು English ನಲ್ಲಿ ಒಂದು ಕವನವನ್ನು ಹಾಗೂ ಕನ್ನಡದಲ್ಲಿ ಒಂದು ಕವನವನ್ನು ಬರೆದಿದ್ದರು. ಅವು ಹೀಗಿವೆ :

Ask not p(Pi)
Why it is transcendental?
Not question the "i"
Why it is square and of
the minus kind?
"e" is irrational!
Why? Because the real
is the basis,
in all cases
of the imaginary
and the complex"

ಬೇಂದ್ರೆಯವರ "ಚತುರೋಕ್ತಿ" ಕವನ ಸಂಕಲನದಲ್ಲಿ (೧೯೭೮) "ಪಾಯಕ್ಕೆ ಯಾವ ಪಾಯ" ಎಂಬ ಶಿರೋನಾಮದಲ್ಲಿ ಬರೆದ ಕವನವನ್ನು ಸೇರಿಸಿದ್ದಾರೆ. ಅದು ಈ ರೀತಿಯಾಗಿದೆ:

-೧-

"ಎರಡು ಕಂಬದ ಮೇಲೆ ಒಂದು ತೊಲೆಯು

-೨

ಮೇಲೆ ಕಾಲು

ತಳಕೆ ತಲೆಯು

-೩-

ವಾಮನನು - ಬಲಿಯು

ಪಾತಾಲದಲಿಯು

ಕಲಿಯೋ ಕಲಿಯು

-೪-

ತ್ರಿವಿಕ್ರಮೋ ವಿಷ್ಣುಃ ಶಿಪಿ ವಿಷ್ಟಃ

ಓಂ ಇಷ್ಟೋಪವಿಷ್ಟಃ

ಹೃದಯಾವಿಷ್ಟಃ

ಸ್ಥಲೋ ವಿಶಿಷ್ಟಃ"

ಈ ಕವನವು ಅತ್ಯಂತ ಮಾರ್ಮಿಕವಾಗಿದ್ದು ಅವರು ತಮ್ಮ "ನಮಸ್ಕಾರ ಮುದ್ರಾ"ದಲ್ಲಿ ವಿವರಿಸಿರುವಂತೆ - "ವೈದಿಕ ವಿಷ್ಣು ಸೂಕ್ತದಲ್ಲಿ ತ್ರಿವಿಕ್ರಮ ಶಿಪಿವಿಷ್ಟ ಎಂಬ ಸಂಕೇತದಿಂದ ಅದು ಹೇಳಲಾಗಿದೆ" - ಎನ್ನುವುದನ್ನು ಸ್ಥಿರೀಕರಿಸುವುದರೊಡನೆ, ವಾಮನನು ಬಲಿಯನ್ನು ಪಾತಾಳಕ್ಕೆ ತುಳಿದ ಗಾಥೆಯಿಂದ "ಕಲಿಯೋ ಕಲಿಯು" ಎಂದು ಎಚ್ಚರಿಸುತ್ತಾರೆ.

ಬೇಂದ್ರೆಯವರ ಸಂಖ್ಯಾಶಾಸ್ತ ಚಿಂತನೆ ಕುರಿತಾಗಿ ವಿವರಣೆ ನೀಡುವಾಗ POINCARE ಹಾಗೂ L.E.J. BROUWER ಇವರು ಸಂಖ್ಯಾಶಾಸ್ತ್ರ ಚಿಂತನೆಯ ಕುರಿತು ಹೇಳಿದ ಮಾತನ್ನು ಪ್ರಸ್ತಾಪಿಸುವುದು ಸೂಕ್ತವೂ - ಉಚಿತವೂ ಆಗುತ್ತದೆ :

Encyclopedia ದಲ್ಲಿ ಈ ಕುರಿತು ಹೀಗೆ ಹೇಳಲಾಗಿದೆ:

POINCARE and L.E.J. BROUWER placed particular emphasis upon INTUITION. This programme, known as INTUITIONISM, stresses that mathematics has priority over logic, that the objects of mathematics are constructed and operated upon in the mind of the mathematician and that it is impossible to define the properties of mathematical objects simply by establishing a number of axioms".

ಬೇಂದ್ರೆಯವರು ತಮ್ಮ ಸಂಖ್ಯಾಶಾಸ್ತ್ರ ಚಿಂತನೆಗಳಲ್ಲಿ ಈ INTUITIONISM ಕಾರ್ಯಮಾಡುತ್ತಿತ್ತು ಎಂಬುದು ನಿರ್ವಿವಾದ. ಅವರು ತಮ್ಮ ಸಾಂಖ್ಯ ಚಿಂತನದಲ್ಲಿ ವೇದ, ಪುರಾಣ, ಉಪನಿಷತ್‌ಗಳಿಂದ ಹಿಡಿದು ಅತ್ಯಾಧುನಿಕ ವಿಜ್ಞಾನಿಗಳ ಚಿಂತನಗಳವರೆಗೆ ವಿಸ್ತರಿಸಿ, ಆಳವಾಗಿ ಅರ್ಥೈಸುತ್ತಿದ್ದರು. ಅವರ ಸಂಖ್ಯಾ ಚಿಂತನೆಯು ನೂರಾರು Note Book ಗಳಲ್ಲಿ

ಅಡಗಿವೆ. ಅವುಗಳೆಲ್ಲದಕ್ಕೂ ಸ್ವ-ರೂಪ ಕೊಡುವ ಸಂಶೋಧನೆಯನ್ನು ಹುಬ್ಬಳ್ಳಿಯಲ್ಲಿ ಸ್ಥಾಪಿತಗೊಂಡಿರುವ "ಬೇಂದ್ರೆ ಸಂಶೋಧನ ಸಂಸ್ಥೆ" ಯೋಜಿಸಿದೆ.

ಇನ್ನು ಬೇಂದ್ರೆ ವಿಜ್ಞಾನ ಸಿದ್ಧಾಂತ ಪ್ರಯೋಗದಲ್ಲಿ ನಾನು ಆಯ್ದುಕೊಂಡಿರುವ ದ್ವಿಪಾದವಾದ "ರಸಾಯನಶಾಸ್ತ್ರ" ಚಿಂತನೆಯತ್ತ ಗಮನ ಹರಿಸೋಣ. Mendeleyev's Periodic Table ಬೇಂದ್ರೆ ವಿಜ್ಞಾನ ಚಿಂತನದ ಇನ್ನೊಂದು ಪ್ರಧಾನ ವಿಷಯ. ಈ ಕುರಿತು Encyclopedia ದಲ್ಲಿ ಈ ರೀತಿ ಉಲ್ಲೇಖಿತವಾಗಿದೆ :

The Russian Chemist DMITRY IVANOVICH MENDELEYEV formulated the Periodic Table, one of the most useful and important generalizations of Chemistry of all Science. The Periodic Law was formulated in March 1869. The Law organized the chemical elements known at the time according to their atomic weight and predicted the existence of more elements"....... Using the Samskrit word for the numeral one, eka, he prefixed the names of known elements that were situated above missing ones in his table. Thus he described the properties of eka aluminium, eka boron, ekasilicon. Mendeleyev's predictions were confirmed. ...... and the discovery of actual elements gallium, scandium and germanium showed that he had almost exactly the properties that he had indicated for them".

ಬೇಂದ್ರೆಯವರು Mendeleyev's Period Tableನ್ನು ಆಧರಿಸಿ ಬಹಳ ಮಹತ್ವದ ಸಂಶೋಧನೆಗಳನ್ನು ಮಾಡಿದ್ದರು. ಬೇಂದ್ರೆಯವರು ತಮ್ಮದೇ ಆದ Periodic Table ರಚಿಸಿದ್ದರು. Bendre Periodic Table ದ ಮಹತ್ವಗಳಲ್ಲಿ ಎರಡನ್ನು ಮಾತ್ರ ಇಲ್ಲಿ ಪ್ರಕಟಪಡಿಸಬಯಸುತ್ತೇನೆ. Mendeleyev's Periodic Tableನ್ನು ವಿಜ್ಞಾನಿಗಳು ವಿಸ್ತರಿಸಿ, ೧೧೧ ಆಟೋಮಿಚ್ ನಂಬರ್‌ವರೆಗೆ ಸೇರ್ಪಡೆಮಾಡಿದ್ದಾರೆ, ಅತ್ಯಂತ ಇತ್ತೀಚಿನ ವಿಸ್ತರಣೆಯಲ್ಲಿ ೧೧೮ರ ವರೆಗೆ ತಂದು, ಮತ್ತೆ ಅದನ್ನು ವಾಪಸ್ ಪಡೆದಿದ್ದಾರೆ. ಅನುಬಂಧದಲ್ಲಿ Bendre ತಮ್ಮ Periodic Table "Theory of Immortality" ಯಲ್ಲಿ ಪ್ರಕಟಿಸಿದ್ದಾರೆ. ಇದರಲ್ಲಿ ಬೇಂದ್ರೆಯವರು ೧೨೭ ಸಂಖ್ಯೆಯ Element ವರೆಗೆ ವಿಸ್ತರಿಸಿದ್ದಾರೆ. ವಿಜ್ಞಾನಿಗಳು ಈ ಕುರಿತು ವಿಚಾರಮಾಡುವ ಮೊದಲೇ ಬೇಂದ್ರೆ ಈ ಪ್ರಕಟಣೆ ಮಾಡಿದ್ದಾರೆ. ಈ ಕುರಿತು ಅವರು ಹೇಳಿರುವುದೆಂದರೆ, "This is Dr. D. R. Bendre's Periodic Table; This is a Periodic Table of elements cast into a new mould. ......In the periodic Table Presented here, he includes inert gases upto 118 only. Further in the present periodic Table Dr. Bendre stops at 128, because there is a gap of freedom until a Prime and Perfect number is reached. In the Periodic Table five pairs of numbers are underlined - They are 18-19, 27-28, 52-53, 90-91 and 101-102. At these stages there is a deviation of the principle laid down in the law of atomic weights. Dr.Bendre has traced

two more such pairs which are unmanifest. The causation advanced by Dr.Bendre for the deviation is the Radio Active decay that sets in at those stages".

ಇದು ಬೇಂದ್ರೆ ನವೆಂಬರ್ ೧, ೧೯೭೭ರಲ್ಲಿ ಪ್ರಕಟಿಸಿರುವ "Theory of Immortality : - a probablse problem and a possible solution" ದಲ್ಲಿ ಇರುವುದು. ಇದನ್ನು ಅನುಬಂಧದಲ್ಲಿ ಕೊಡಲಾಗಿದೆ.

Periodic Table ಸಂಬಂಧ ಎರಡು ಮಹತ್ವದ ವಿಷಯಗಳನ್ನು ಗಮನಿಸಬೇಕಾಗಿದೆ.

ಇಂದು (೨೬-೩-೨೦೦೬) Computer ದಲ್ಲಿ ತೆಗೆದ element 118 ಇಲ್ಲಿ (Annexure II) ಎಂದು ತೋರಲಾಗಿದೆ. (Annex-III) ದಲ್ಲಿ element 118ರ ಬಗ್ಗೆ ಬಂದ ಇತ್ತೀಚಿನ ಸುದ್ದಿ ಪ್ರಕಟವಾಗಿದೆ. Lawrence Berkley Lab ದವರು Element 118 (Atomic Symbol 440) ಅನ್ನು ವಾಪಸ್ ಪಡೆದುಕೊಂಡು, ಈ ಕುರಿತು ಸಂಶೋಧನೆಯು ಮುಂದುವರಿದಿದೆ ಎಂದು ಹೇಳಿದ್ದಾರೆ. ಇದೆಲ್ಲವೂ ಗಮನಾರ್ಹ. ಏಕೆಂದರೆ ಬೇಂದ್ರೆಯವರು ತಮ್ಮ Periodic Table ನಲ್ಲಿ ೧೨೮ ರವರೆಗೆ ತೋರಿಸಿದ್ದಾರೆ. ಇದನ್ನು ೧೯೭೭ ರಲ್ಲೇ ಮಾಡಿದ್ದಾರೆ. ವಿಜ್ಞಾನಿಗಳು ಈವರೆಗೆ ೧೧೮ರ ವರೆಗೂ ಕೂಡ ಮುಟ್ಟಿಲ್ಲ. ಇದು ಬೇಂದ್ರೆ ವಿಜ್ಞಾನ ಚಿಂತನೆಗೆ ದೊರೆತ ಒಂದು ಮಹಾನ್ ವಿಜಯ.

ಈ ಸಂಬಂಧ ಇನ್ನೊಂದು ಪ್ರಸಂಗವನ್ನು ಕೂಡ ದಾಖಲಿಸುವ ಅವಶ್ಯಕತೆ ಇದೆ. ಅದು ವಿಶ್ವವಿಖ್ಯಾತ ವಿಜ್ಞಾನಿ ಹಾಗೂ ನೋಬೆಲ್ ಪಾರಿತೋಷಿಕ ಕುರಿತು ಈ ವರ್ಷ Physicsಗೆ ಕೊಡಲಾದ ಪ್ರಶಸ್ತಿ ಕುರಿತು ವಿವಾದವನ್ನು ಎಬ್ಬಿಸಿರುವ E.C.G. ಸುದರ್ಶನ್ ೧೯೮೧ರ ಜುಲೈ ೨೭-೨೮-೨೯ ರಲ್ಲಿ ಬೇಂದ್ರೆಯವರು ಧಾರವಾಡದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಆಸ್ಪತ್ರೆಯಲ್ಲಿ ಸಂದರ್ಶನ ನಡೆಸಿದರು. ಆ ಕಾಲದಲ್ಲಿ ನಡೆದ ಚರ್ಚೆ Periodic Table ಕುರಿತೂ ಇತ್ತು. Bendre ಯವರು ವಿಜ್ಞಾನಿ ಸುದರ್ಶನ್‌ಗೆ ಕೇಳಿದ್ದರು : Period Tableನಲ್ಲಿ ೫ ಕಡೆ Atomic Number ಹೆಚ್ಚಿದಂತೆ, Atomic Weight ಹೆಚ್ಚುವುದಿಲ್ಲ, ಕಡಿಮೆಯಾಗುತ್ತದೆ. ಇದು Periodic Table ದಲ್ಲಿ ಅನುಸರಿಸಲಾದ Law ವಿರುದ್ಧ ಇದೆ. ಈ Deviation ಗೆ ನಿಮ್ಮ ವಿವರಣೆ ಏನು?'' ಎಂದು. ಅದಕ್ಕೆ Sudershan ಕೊಟ್ಟ ಉತ್ತರ - ''ನಮ್ಮಲ್ಲಿ ಇದಕ್ಕೆ ವಿವರಣೆ ಇರುವುದಿಲ್ಲ, ನಾವು ಇವುಗಳನ್ನು mystic elements ಎಂದು ಕರೆಯುತ್ತೇವೆ'' ಎಂದು. ಬೇಂದ್ರೆಯವರು ಈ deviationsಗೆ ತಾವು ಉತ್ತರವನ್ನು ನಕ್ಷತ್ರ ವಿಜ್ಞಾನದ ರೀತ್ಯ ಕಂಡುಹಿಡಿದಿರುವುದಾಗಿ ಹೇಳಿದಾಗ ಸುದರ್ಶನ್ ಚಕಿತಗೊಂಡಿದ್ದರು. ಇದು ಬೇಂದ್ರೆ ವಿಜ್ಞಾನ ಚಿಂತನೆಗೆ ದೊರೆತ ಇನ್ನೊಂದು ಮಹತ್ವದ ವಿಜಯವಾಗಿತ್ತು.

ಇನ್ನು ಬೇಂದ್ರೆ ವಿಜ್ಞಾನ ಸಿದ್ಧಾಂತ-ಪ್ರಯೋಗದ ತೃತೀಯ ಪಾದವಾದ ''ವಿಶ್ವಶಾಸ್ತ್ರ''ವನ್ನು ಕುರಿತು ಪ್ರಸ್ತಾಪವನ್ನು ಮಾಡುತ್ತೇನೆ.

ಬೇಂದ್ರೆಯವರು "Theory of Immortality, - a Probable Problem and a

possible solution" ಇದನ್ನು "Bendre Cosmology Series-1" ಎಂದು ೧-೧೧-೧೯೭೭ ರಂದು ಕರ್ನಾಟಕ ರಾಜ್ಯೋತ್ಸವ ಸ್ಮರಣೆಗೆಂದು ಪ್ರಕಟಿಸಿದ್ದರು. ಇದು ಬೇಂದ್ರೆ ವಿಶ್ವಶಾಸ್ತ್ರದ ಮೊದಲನೆಯ ಪ್ರಕಟಣೆಯಾಗಿತ್ತು. ಇದರಲ್ಲಿ ಬೇಂದ್ರೆಯವರು ಆರು ಪರಿಕಲ್ಪನೆಗಳನ್ನು ಪ್ರಕಟಿಸಿದ್ದಾರೆ. ಅವರು ಈ ಪ್ರಕಟಣೆಯಲ್ಲಿ ವಿಶ್ವದ ಚಿಂತಕರಿಗೆ ಕೊಟ್ಟ ಆಹ್ವಾನವು ಈ ರೀತಿಯಾಗಿದೆ. Western dogmatism called christian morality talks of a humanity of their own conception while their brothers the rational Scientists dare speak that they are not concerned with good and evil. This is a crisis; This is also a challenge - Dr.Bendre responds to the crisis, and answers this kicking challenge of the Western arrogance and ignorance with his theory of immortality in contrast with mortality. He gives a call to those intelligent human beings who care to understand and are aware of this crisis in human affairs on a global sacle, to come forth to take up the challenge. Dr. Bendre's Theory of Immortality; a probable problem and a possible solution" is also a challenge to a challenge and through the riddles he has posed in this paper, he seeks to solve them" ಬೇಂದ್ರೆಯವರು ತಮ್ಮ ''ವಿಶ್ವಶಾಸ್ತ್ರ''ದ ಮೂಲಕ ವಿಶ್ವದ ಚಿಂತಕರಿಗೆ ಒಡ್ಡಿರುವ ಆಹ್ವಾನವು, ಗೊಂದಲದಲ್ಲಿ ಸಿಲುಕಿರುವ ವಿಶ್ವವನ್ನು ರಕ್ಷಿಸುವ ಸಲುವಾಗಿ. ತಾವು ವಿಜ್ಞಾನ ಸಿದ್ಧಾಂತ-ಪ್ರಯೋಗಗಳ ಮೂಲಕ ಅನ್ವೇಷಣೆ ಮಾಡಿರುವ ಸತ್ಯವು ವಿಶ್ವದ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸುತ್ತವೆ ಎಂಬ ವಿಶ್ವಾಸವನ್ನು ಅವರು ಇಲ್ಲಿ ವ್ಯಕ್ತಪಡಿಸಿದ್ದಾರೆ. ತತ್ತ್ವಜ್ಞಾನಿ ಬೇಂದ್ರೆಯವರ ದೂರದರ್ಶಿತ್ವ ಇದಾಗಿದೆ.

ಮಹಾವಿಜ್ಞಾನಿ - ಮಹಾತತ್ತ್ವಜ್ಞಾನಿ ಬೇಂದ್ರೆ ಮಹಾಕವಿಗಳೂ ಆಗಿದ್ದರಿಂದ, ಇವರ ಈ ವೈಜ್ಞಾನಿಕ ಚಿಂತನೆಯ ಪ್ರವಾಹ ಅವರ ಕಾವ್ಯದಲ್ಲಿ ಹೇಗೆ ಹರಿದುಬಂದಿದೆ ಎನ್ನಲು, ಕೆಲವೇ ಉದಾಹರಣೆಗಳನ್ನು ಕೊಡಬಯಸುತ್ತೇನೆ.

''ಹಕ್ಕಿ ಹಾರುತಿದೆ ನೋಡಿದಿರಾ'' - ಬೇಂದ್ರೆಯವರ ಅತ್ಯಂತ ಜನಪ್ರಿಯ ಕವನ. ಅದರಲ್ಲಿಯ ಈ ಸಾಲುಗಳನ್ನು ಗಮನಿಸೋಣ:

''ಬೆಳ್ಳಿಯ ಹಳ್ಳಿಯ ಮೇರೆಯ ಮೀರಿ,
ತಿಂಗಳಿನೂರಿನ ನೀರನು ಹೀರಿ
ಆಡಲು ಹಾಡಲು ತಾ ಹಾರಾಡಲು
ಮಂಗಳ ಲೋಕದ ಅಂಗಳಕೇರಿ
ಹಕ್ಕಿ ಹಾರುತಿದೆ ನೋಡಿದಿರಾ?''

ಬೇಂದ್ರೆಯವರ ಕಾಲಪಕ್ಷಿಯು ವಿಜ್ಞಾನಿಗಳು ಚಂದ್ರಲೋಕಕ್ಕೆ ಹೋಗುವ ಮುನ್ನವೇ, ಮಂಗಳಲೋಕದ ಯೋಜನೆಮಾಡುವ ಮೊದಲೇ, ೧೯೨೮ರಲ್ಲೇ ''ಮಂಗಳಲೋಕ''ದ ಅಂಗಳಕ್ಕೇರಿತ್ತು''.

ಬೇಂದ್ರೆಯವರ "ಅನಂತ ಪ್ರಣಯ" ಕವನವೂ ಅತ್ಯಂತ ಜನಪ್ರಿಯವಾದ ಕವನವೇ.

"ಉತ್ತರ ಧ್ರುವದಿಂ ದಕ್ಷಿಣ ಧ್ರುವಕೂ
ಚುಂಬಕ ಗಾಳಿಯು ಬೀಸುತಿದೆ,
ಸೂರ್ಯನ ಬಿಂಬಕೆ ಚಂದ್ರನ ಬಿಂಬವು
ರಂಬಿಸಿ ನಗೆಯಲಿ ಬೀಸುತಿದೆ".

ಉತ್ತರಧ್ರುವ ಹಾಗೂ ದಕ್ಷಿಣ ಧ್ರುವಗಳ ನಡುವಣ Magnetic Pull and Magnetic field ಒಂದು ವೈಜ್ಞಾನಿಕ ಸತ್ಯ. ಇದನ್ನು ಬೇಂದ್ರೆಯವರು ರಚಿಸಿದ್ದು ೧೯೩೩ರಲ್ಲಿ.

ಇವರು "ಸೂರ್ಯಪಾನ" ಕವನವನ್ನು ರಚಿಸಿದ್ದು ೧೯೫೬ರಲ್ಲಿ. ಇಲ್ಲಿ ವಿಜ್ಞಾನದ ಜ್ಯೋತಿಗಾಗಿ ತಪಿಸುವ ಹೃದಯ ಕಮಲವನ್ನು ಪ್ರತಿಮಿಸಿರುವುದು ಮಾರ್ಮಿಕವಾಗಿದೆ.

"ಸೂರ್ಯಪಾನವ ನೋಡು ಹೇಗೆ ನಿಂತಿಹುದು
ಎನುವಂತೆ - ದಿವ್ಯತೆಯ ದೀಕ್ಷೆ ಇಂತಿಹುದು
ಮೇರು ದಂಡವು ಚಿಗಿತು ಹೂತ ಹಾಗೆ
ಹೃದಯದಾಕೂತಿಗಿದೆ ಕಣ್ಣು ಮೇಗೆ".

ಈ ಸೂರ್ಯಪಾನಕ್ಕೆ ಸೂರ್ಯನನ್ನೇ ಕುಡಿಯುವ ಕೆಚ್ಚು. ಇದು ನಿಂತಿರುವ ರೀತಿ ದಿವ್ಯತೆಯ ದೀಕ್ಷೆಯನ್ನು ಪ್ರತಿಬಿಂಬಿಸುತ್ತದೆ. "ಮೇರುದಂಡವು ಚಿಗಿತು ಹೂತಹಾಗೆ" ಎಂದಾಗ ಬೆನ್ನು ಹುರಿಯಲ್ಲಿರುವ ಷಟ್ಚಕ್ರಗಳು ಹೂತು ಸಹಸ್ರದಳದಲ್ಲಿ ಅರಳಿದಂತೆ. 1x2x3x4x5x6=720 ಇದು ಮೇರುದಂಡ. ಇದು ಚಿಗಿತಾಗ, ಅರಳಿದಾಗ ಏಳನೆಯ ಶಕ್ತಿ ಅಂಕುರಿಸುತ್ತದೆ. ಇದು ಸಹಸ್ರದಳದ ಅರಳುವಿಕೆ. ಸೂರ್ಯಪಾನದ ಹೃದಯದ ಆಕೂತಿಗೆ=ಇಚ್ಛೆಗೆ ಕಣ್ಣು ಮೇಗೆ. ಇದು ಹೃದಯ-ವಿವೇಕದ ಛಾಯೆಯನ್ನು ತೋರುತ್ತದೆ.

ಕೊನೆಯದಾಗಿ ಅಣುವಿನ ಬಗ್ಗೆ ಬೇಂದ್ರೆಯವರು ಬರೆದ ಎರಡು ಕವನಗಳನ್ನು ಸಾದರಪಡಿಸಬಯಸುತ್ತೇನೆ: "ನಾ-ನೀ" ಹಾಗೂ "ಅಣುವಿನೊಡಲೊಳಗೆ" ಈ ಕವನಗಳನ್ನು ವೀಕ್ಷಿಸೋಣ.

"ಆಟಮ್" ಶರಣಂ ಗಚ್ಛಾಮಿ
ಮೈಗೊಂಬುದೆಂಬ ನೀ ಮೈಗೆರೆದ ಯಾವುದೋ ಸತ್ತ್ವ
ಈ ತತ್ತ್ವ ಹುಸಿ, ಕವಡು, ಕಂಟಕ ಎಂದು ನಾ ಎಂಬೆ.
ಮೈ ಬಂತು, ಮೈ ಹೋಯ್ತು ಆಗು ಹೋಗಿನ
ಇರವು ಬರಿಯ ಕಣ್ಣಿನ ಮಾಟ

''ನಾ'' ''ನೀ'' ಗಳೋ ಶಬ್ದ-ಸರ್ವನಾಮದಾ ಆಟ''

''ನಾ'' ''ನೀ'' ಎಂಬ ಸರ್ವನಾಮದ ಆಟದಲ್ಲಿ ವಿಶ್ವದ ಬೃಹತ್ ಅಣುರಾಷ್ಟ್ರಗಳು ವಿಶ್ವವನ್ನು ವಿನಾಶದ ಅಂಚಿಗೆ ತರುತ್ತಿರುವ ಚಿತ್ರಣ ಇಲ್ಲಿದೆ. ''ಬುದ್ಧಂ ಶರಣಂ ಗಚ್ಛಾಮಿ'' ಎಂಬ ''ತತ್ತ್ವಮಸಿ''ಗೆ ಶರಣುಹೊಡೆದು, ''ಆಟಮ್'' ಶರಣಂ ಗಚ್ಛಾಮಿ ಆದರೆ, ತತ್ತ್ವ ಹುಸಿಯಾಗಿ, ಈ ವಿಜ್ಞಾನದ ಅತಿರೇಕ ಸರ್ವನಾಶಕ್ಕೆ ಹಾದಿಮಾಡುತ್ತದೆ.

''ಅಣುವಿನೊಡಲೊಳಗೆ'' ಕವನದಲ್ಲಿ ಬೇಂದ್ರೆ ಹೇಳುತ್ತಾರೆ:

''ಅಣುವಿನೊಡಲೊಳಗೆ ಆಯೆಂದು ಬಾಯ್ದೆರೆದಿರುವ
ಮಹತೋ ಮಹೀಯವೇ! ನಿನ್ನ ಬರವಿನ ಮುಂಚೆ
ಬರುವ ನೆಳಲೋ ಏನೊ, ಇದುವೆ ಕಾಡಿಗೆ ಕರೆವ
ಕಾರ್ಗಾಲ! ಈ ಬೆಳಕು ಸುಡುವ ಸಿಡಿಲೇ ಮಿಂಚೆ?

''ಸಾವಿರದ ನಿನ್ನ ಮೊಗದಲ್ಲಿ ಸಾವಿರ ಬಣ್ಣ''.

ಈ ಕವನದಲ್ಲಿ ಕವಿ ಅಣುವಿನ ಸಂಹಾರಶಕ್ತಿಯ ರೂಪರೇಖೆಗಳ ಮಿಂಚು, ಅದರ ಸುಡುವ ಸಿಡಿಲನ್ನು ಬಿಂಬಿಸಿದ್ದಾನೆ. ಇದು ಕಾಡಿಗೆ ಕರೆವ ಕಾರ್ಗಾಲ! ಇದುವೇ ಮಾನವಕೋಟಿಯ ಅಳಿಗಾಲ.

ಹೀಗೆ ಹರಿದು ಬಂದಿದೆ ಬೇಂದ್ರೆ ವಿಜ್ಞಾನ ಲಹರಿ, ಕಲ್ಪನಾ ವಿಲಾಸ.

ಬೇಂದ್ರೆಯವರ ವಿಜ್ಞಾನ ಸಿದ್ಧಾಂತ-ಪ್ರಯೋಗ ಅಂದು-ಇಂದು-ನಾಳೆಗಳ ಸಮ್ಮಿಲನದಿಂದ ನವಮಾನವ ಆವಿರ್ಭಾವವಾಗಬೇಕು, ನವಸಮಾಜ, ನವವಿಶ್ವಸೃಷ್ಟಿಯಾಗಬೇಕು ಎಂಬ ದಿಕ್ಕಿನಲ್ಲಿ ಸಾಗಿದ ಚಿರಂತನ ಚಿಂತನೆಯಾಗಿದೆ. ಅವರಿಗೆ ಬೇಕಾಗಿರುವುದು -

''ಹೊಸ ಸೃಷ್ಟಿಯೆ ಬರಬಹುದು'' ಆ ಹೊಸ ಸೃಷ್ಟಿಗಾಗಿ ನಾವೆಲ್ಲರೂ ಶ್ರಮಿಸೋಣ. ಇದು ನಾವು ಈ ಮಹಾಕವಿ - ಮಹಾವಿಜ್ಞಾನಿ - ಮಹಾಮಾನವನಿಗೆ ಸಲ್ಲಿಸುವ ನಿಜವಾದ ಶ್ರದ್ಧಾರ್ಪಣೆ.

ಗುರುವರ್ಯ ವರಕವಿ ದ.ರಾ. ಬೇಂದ್ರೆಯವರನ್ನು ಕುರಿತು ನಾನು ಬರೆದ ''ಮಹಾಮಾನವ'' ಕವನವನ್ನು ಓದಿ, ನನ್ನ ಮಾತಿಗೆ ವಿರಾಮವನ್ನು ಹಾಕಿ, ಮತ್ತೊಮ್ಮೆ ನಿಮಗೆಲ್ಲರಿಗೂ ಕೈಮುಗಿದು ನಮಸ್ಕರಿಸುತ್ತೇನೆ.

ಮಹಾಮಾನವಾ
ರಸಋಷಿ ಬೇಂದ್ರೆ

ರಸಋಷಿ ಬೇಂದ್ರೆ!
ಏನಿದು ನಿನ್ನ ಮೋಜು?
ಅಂಕಿಗಳನೆಲ್ಲ "ಲಾಕು" ಮಾಡಿರುವೆ
ಅವುಗಳ "ಅನ್ ಲಾಕಿಗೆ" ಕೀಲಿ ಮಾಡಿರುವೆ,
"ಲಾಕ್-ಅನ್‌ಲಾಕು"ಗಳ ಮೋಜುಮಾಡಿ
"ವಿಶ್ವಧಾರಣ"ದ ಗುಟ್ಟು ರಟ್ಟು ಮಾಡಿರುವೆ

ವರಕವಿ ಬೇಂದ್ರೆ!
ನೀನೇನು ಮಾಂತ್ರಿಕನೆ?
"ಸೂರ್ಯ-ಚಂದ್ರ"ರ ನಿನ್ನ ಅಂಕಿಗಳ ವಂಕಿಯಲ್ಲಿ
ಹಿಡಿದಿಟ್ಟಿರುವೆ,
"ತಾರೆಗಣ"ವ ನಿನ್ನ ಧ್ರುವಪಥದಿ ತಿರುಗಿಸುತ್ತಿರುವೆ
"ವಿಶ್ವಕ್ರಿಯೆ"ಯ ನಿನ್ನ ಹತ್ತು ಬೆರಳುಗಳ
ಸೂತ್ರದ ಮೇಲೆ ಆಡಿಸುತ್ತಿರುವೆ

ಶಬ್ದಬ್ರಹ್ಮ ಓ ಬೇಂದ್ರೆ!
ಏನಿದು ನಿನ್ನ ಮೋಜು?
ನಿನ್ನ ಜೀವನದಿಯಲ್ಲಿ "ವಸ್ತು" ಮಿಂದು
ಜೀವಂತವಾಗಿಹುದು
ನಿನ್ನ ಬವಣೆಯ ಕುಲುಮೆಯಲ್ಲಿ ಕತ್ತಲೆಯು ಬೆಂದು ಬೆಳಕಾಗಿಹುದು
ನಿನ್ನ ಜ್ಞಾನದ ಎರಕದಲ್ಲಿ ಶಬ್ದ ಅರ್ಥವಾಗಿಹುದು
ಮಾತು ಜ್ಯೋತಿಯಾಗಿಹುದು
"ಅಕ್ಷರ"ವು ನಿನ್ನ ಕಲ್ಪನಾಕಾಶದಲ್ಲಿ ನಕ್ಷತ್ರಮಾಲೆಯಾಗಿ ಜಗವ ಬೆಳಗಿಹುದು.

ಮರನಲ್ಲ ನೀನು
ಅಮರ ಬೇಂದ್ರೆ!
ನೀನು ಚಿರಂತನ ಬೆಳಕು!
ಕಲುಷಿತ ಮಾನವನ ನವಮಾನವನಾಗಿ ಪರಿವರ್ತಿಸು
ವಿಶ್ವಕುಟುಂಬದ ನಿನ್ನ ಕನಸು ನನಸಾಗಿಸು
ಬೇಂದ್ರೆ! ನೀನು ಮಹಾಮಾನವ! ಚಿರಾಯುವಾಗು.

- "ಎಚ್ಚರ"- ಕುವಲಯ ಶ್ಯಾಮ ಶರ್ಮಾ

ಅನುಬಂಧ :

ಬೇಂದ್ರೆ ಪೀರಿಯಾಡಿಕ್ ಟೇಬಲ್

DIAGRAM-2

This is Dr. D. R. Bendre's Periodic Table. This is a Periodic Table of elements cast into a new mould. The basis of this new casting is the connection that has been traced between the inert gases and the square of even numbers.

	1	2	3	4	5	6	7	8	9	
		10	11	12	13	14	15	16	17	
		18	19	20	21	22	23	24	25	
26	27	28	29	30	31	32	33	34	35	
		36	37	38	39	40	41	42	43	
44	45	46	47	48	49	50	51	52	53	
		54	55	56	57	58	59	60	61	
			62	63	64	65	66	67	68	
			69	70	71	72	73	74	75	
76	77	78	79	80	81	82	83	84	85	
		86	87	88	89	90	91	92	93	
			94	95	96	97	98	99	100	
			101	102	103	104	105	106	107	
108	109	110	111	112_{+}	113_{-}	114_{o}	115_{+}	116_{-}	117_{o}	
		118_{+}	119_{-}	120_{o}	121_{+}	122_{-}	123_{o}	124_{+}	125	128_{+}
									126_{-}	127_{o}

*ಬೇಂದ್ರೆ ವಿಜ್ಞಾನ ಸಿದ್ಧಾಂತ - ಪ್ರಯೋಗ : ಜೀವ ರಸಾಯನಶಾಸ್ತ್ರ ದೃಷ್ಟಿಕೋನ

● ಡಾ|| ವಾಮನ ಬೇಂದ್ರೆ

ಆಧುನಿಕ ಯುಗ ವಿಜ್ಞಾನ ಯುಗ! ಈ ವಿಜ್ಞಾನ ಯುಗದ ಪ್ರಗತಿ ಕಣ್ಣು ಕುಕ್ಕಿಸುವಂಥದು ಹಾಗೂ ಆಶ್ಚರ್ಯ, ಅದ್ಭುತ ಚಮತ್ಕಾರಗಳಿಂದ ಕೂಡಿದ್ದು ಎಂಬುದು ಸತ್ಯ. ''ಮಾನವನ ಭವಿಷ್ಯದ ವಿಚಾರಮಾಡುವಂಥವನು ಆಧುನಿಕ ವಿಜ್ಞಾನಗಳನ್ನು ಹೊಸ ದೃಷ್ಟಿಕೋನಗಳಿಂದ ಅಭ್ಯಸಿಸಲೇಬೇಕು'' ಎಂಬ ಸಂದೇಶ ಬೇಂದ್ರೆಯವರು ೧೯೧೪ರಲ್ಲಿ ಅಭ್ಯಸಿಸಿದ ಶ್ರೀ ಅರವಿಂದರ ವಾಙ್ಮಯದಿಂದ ಪಡೆದರು. ಆ ಕಾಲದ ಮ್ಯಾಟ್ರಿಕ್ ವಿದ್ಯಾಭ್ಯಾಸದಲ್ಲಿ ನಕ್ಷತ್ರವಿಜ್ಞಾನ, ಜ್ಯೋತಿಷ ಹಾಗೂ ಫಲ ಜ್ಯೋತಿಷ್ಯ ವಿಷಯಗಳಿದ್ದವು. ವಿಜ್ಞಾನದ ಎಲ್ಲ ಶಾಖೆಯಳನ್ನು ತಿಳಿದುಕೊಳ್ಳುವ ನಿಶ್ಚಯ ಬೇಂದ್ರೆ ಮಾಡಿಬಿಟ್ಟರು.

ವೈದಿಕ ಮನೆತನದಲ್ಲಿ ಹುಟ್ಟಬೆಳೆದ ವೇದವಿತ್‌ಕವಿಗೆ ಋಗ್ವೇದಾದಿ ಭಾರತೀಯ ಜ್ಞಾನದ ಅರಿವು ಇತ್ತು. ಋಗ್ವೇದದ ಮಂತ್ರಗಳನ್ನೇ ಪ್ರಶ್ನಿಸುವ ಜಾಣತನವಿತ್ತು. ಸೂರ್ಯ, ಚಂದ್ರ, ಪೃಥ್ವಿ, ಮಾನವ, ಸೂರ್ಯೋದಯ, ಮಧ್ಯಾಹ್ನ, ಸಂಧ್ಯಾ, ಹಗಲು, ರಾತ್ರಿ, ಏಳುವಾರ, ಸಪ್ತರಶ್ಮಿ, ಸಪ್ತಅಶ್ವ, ವಾತ ಪಿತ್ತ ಕಫ, ಸತ್ತ್ವ, ರಜ, ತಮ, ''ಚತ್ವಾರಿಶೃಂಗಾಃ, ತ್ರಯೋಽಸ್ಯಪಾದಾಃ ದ್ವೇಶೀರ್ಷೇ ಸಪ್ತಹಸ್ತಾಸೋಽಸ್ಯ ತ್ರಿಧಾಬದ್ಧಃ ಋಷಭಃ ರೋರವೀತಿ ಮಹೋದೇವೋ ಮರ್ತ್ಯಾನ್ ಆವಿವೇಶ ಋಗ್ವೇದ-೫.೮.೩ ಮಾನವೀಯತೆಯ ಧರ್ಮ-

---

*ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಆಶ್ರಯದಲ್ಲಿ ರಜತ ಮಹೋತ್ಸವ ವರ್ಷದಲ್ಲಿ, ಏರ್ಪಡಿಸಿದ ''ದ. ರಾ. ಬೇಂದ್ರೆ ದತ್ತಿ ಉಪನ್ಯಾಸ'' - ಅಧ್ಯಕ್ಷೀಯ ಭಾಷಣ - ೨೬-೩-೨೦೦೬

ಅಮರತ್ವದ ಹಾದಿ. ಎಂಬ ಮಂತ್ರದಲ್ಲಿಯ ಚತ್ವಾರಿ=ನಾಕು=ಪೃಥ್ವಿ ಸೂರ್ಯ, ಚಂದ್ರ ಮತ್ತು ಮಾನವ. ತ್ರಯೋ=ಮೂರು=ಪ್ರತಿಯೊಬ್ಬನು ಪ್ರಾತಃಕಾಲ, ಮಧ್ಯಾಹ್ನಕಾಲ ಹಾಗೂ ಸಾಯಂಕಾಲ ಮಾಡಲೇಬೇಕಾದ ತ್ರಿಸಂಧ್ಯಾವಂದನೆ. ಸಪ್ತಹಸ್ತಾ=ವಾರದ ಏಳು ದಿನಗಳು, ಸೂರ್ಯ ರಥದ ಏಳು ಕುದುರೆಗಳು. ಈ ಮೂರರಲ್ಲಿ ಸೂರ್ಯ, ಸೂರ್ಯಕಾಲ, ಸೂರ್ಯಗತಿಗೆ ಪ್ರಾಧಾನ್ಯ. ಸೂರ್ಯ=ಬೆಳಕು=ಜ್ಞಾನದ ಸಂಕೇತ. ''ಚಂದ್ರಮಾ ಮನಸೋಜಾತಃ''= ಮನಸ್ಸಿನ ಒಡೆಯನಾದ ಚಂದ್ರ ಅತ್ಯಾನಂದಕ್ಕೆ ಕಾರಣ. ಈ ಚಂದ್ರನ ಗತಿಯನ್ನು ಅವಲಂಬಿಸಿ ಸ್ತ್ರೀಯ ಋತುಕಾಲ ಹಾಗೂ ಸ್ತ್ರೀಬೀಜದ ನಿರ್ಮಿತಿ. ಸೂರ್ಯ ಪುರುಷನಲ್ಲಿಯ ವೀರ್ಯಬೀಜ= ಉತ್ಪತ್ತಿಗೆ ಕಾರಕಶಕ್ತಿ. ಪುರುಷ ಹಾಗೂ ಸ್ತ್ರೀ ಮಿಲನದಿಂದಲೇ ಗಂಡು ಅಥವಾಹೆಣ್ಣು ಮಗುವಿನ ಜನನ. ಇದು ವೈಜ್ಞಾನಿಕ ಸತ್ಯ.

ಪಾಶ್ಚಿಮಾತ್ಯ ವಿಜ್ಞಾನ ಶಾಖೆಗಳು ಪ್ರತಿಕ್ಷಣಕ್ಕೆ ಹೊಸ ಹೊಸ ಪ್ರಯೋಗಗಳನ್ನು ಮಾಡಿ ಪ್ರಗತಿ ಸಾಧಿಸುತ್ತಿವೆ. ಇದು ಸ್ತುತ್ಯವೆ. ಆದರೆ ಇದರ ಗರ್ಭದಲ್ಲಿ ಜಗತ್ತಿನ ವಿನಾಶದ ಚಿಂತನೆ ಇರುವುದರತ್ತ ದುರ್ಲಕ್ಷ ಮಾಡುವುದು ಅಯೋಗ್ಯ ಎಂದು ಬೇಂದ್ರೆ ನಿರ್ಣಯಿಸಿದರು. ಜಗತ್ತು ಇರುವುದೇ ಮಾನವನಿಗಾಗಿ. ಮಾನವ ವಿರೋಧಿವಿಜ್ಞಾನದ ನೆತ್ತಿಯನ್ನು ಕುಕ್ಕಬೇಕು. ಮಾನವ ಸಂಹಾರ ಬೀಜವನ್ನು ಸುಟ್ಟುಹಾಕಬೇಕು. ಇದರ ಸಂಶೋಧನೆಗಾಗಿ ಬೇಂದ್ರೆ ತಮ್ಮನ್ನು ತೊಡಗಿಸಿಕೊಂಡರು.

''ಬೆಳ್ಳಿಯ ಹಳ್ಳಿಯ ಮೇರೆಯ ಮೀರಿ
ತಿಂಗಳಿನೂರಿನ ನೀರನು ಹೀರಿ
ಆಡಲು ಹಾಡಲು ತಾ ಹಾರಾಡಲು
ಮಂಗಳಲೋಕದ ಅಂಗಳಕೇರಿ''

ಎಂಬುದಾಗಿ ಕವಿಕಲ್ಪನಾಶಕ್ತಿಯ ಹಕ್ಕಿಗೆ ೧೯೨೮ರಲ್ಲಿ ಆಜ್ಞೆಕೊಟ್ಟರು ಬೇಂದ್ರೆ. ಬೆಳ್ಳಿ=ಶುಕ್ರ, ತಿಂಗಳಿನೂರು=ಚಂದ್ರ ಹಾಗೂ ಮಂಗಳಲೋಕ=ಮಂಗಳಗ್ರಹದ ವ್ಯಾಪ್ತಿ. ಆಧುನಿಕ ವಿಜ್ಞಾನಿಗಳು ಚಂದ್ರ ಹಾಗೂ ಮಂಗಳ (ಮಾರ್ಸ್) ಲೋಕಕ್ಕೆ ಹಾರಿದ್ದು ಇತ್ತೀಚಿನ ಪ್ರಗತಿ. ಬ್ರಿಟಿಷ್ ಸಾಮ್ರಾಜ್ಯವಾದಿಗಳು ಭಾರತದ ಸ್ವಾತಂತ್ರ್ಯವನ್ನು ನುಂಗಿದ್ದರ ವಿರುದ್ಧ ಹೋರಾಡುವ ಬೇಂದ್ರೆ ಕಾವ್ಯಶಕ್ತಿ ಸತತವಾಗಿ ಮಾನವನ ಅಭ್ಯುದಯ, ಮಾನವ ಕಲ್ಯಾಣ ಮತ್ತು ನವಮಾನವೀಯತೆಯ ಆವಿರ್ಭಾವಕ್ಕಾಗಿಯೇ - ಚಿಂತನ, ಮನನ, ಅನ್ವೇಷಣೆ ಮಾಡುತ್ತಿತ್ತು.

ಋಗ್ವೇದ ಕಾಲದಿಂದಲೂ ಯಜ್ಞಕ್ಕೆ ಮಹತ್ತ್ವ. ಯಜ್ಞದ ಅಗ್ನಿಯನ್ನು ಮಂತ್ರಪಠನದಿಂದ ಉನ್ಮುಖಗೊಳಿಸುತ್ತಿದ್ದರು. ಅನಂತರ ಪ್ರಾಪ್ತವಾಗುವ ಪ್ರಸಾದದಿಂದ ಸಂತತಿ, ಭೋಗ, ಭಾಗ್ಯ ಪಡೆಯುತ್ತಿದ್ದರು ಎಂಬುದು ಭಾರತದ ಗತಕಾಲದ ಮಹತಿ. ಆಧುನಿಕ ಕಾಲದಲ್ಲಿ ಮಂತ್ರಹೇಳಿ ಅಗ್ನಿಹೊತ್ತಿಸುವವರ ಭೆಟ್ಟಿ ಬೇಂದ್ರೆಯವರಿಗೆ ಆಗಿರಲಿಲ್ಲ. ಅಗ್ನಿ ಹುಟ್ಟಿಸುವ ತಂತ್ರ ಆಧುನಿಕ ಮಾನವ ಮರೆತನಲ್ಲ ಎಂಬ ವೇದನೆ ಅವರಿಗಿತ್ತು. ಮುಂದೊಮ್ಮೆ ಅತ್ಯಂತ ವಯೋವೃದ್ಧ ವ್ಯಕ್ತಿಯೊಬ್ಬ ಅಗ್ನಿ ಪ್ರಜ್ವಲನವನ್ನು ಮಂತ್ರಶಕ್ತಿಯಿಂದ ಮಾಡಿದ್ದನ್ನು ಬೇಂದ್ರೆ ಕಂಡರು. ಆ ವಿದ್ಯೆ

ಈಗೆಲ್ಲಿ ಎಂಬುದು ಬೇಂದ್ರೆಯವರ ಚಿಂತನದ ಪ್ರಮುಖ ವ್ಯಾಪ್ತಿಯಾಯಿತು.

''ಅಗ್ನಿದೇಹಿಗೆ ಲಿಂಗ ಸಂಬಂಧಿ ಈ ಭೂಮಿ''. ಭೂಮಿಯಲ್ಲಿ ಅಗ್ನಿ ಅಡಗಿರುತ್ತದೆ. ಮನುಷ್ಯನಲ್ಲಿಯೂ ಅಗ್ನಿ ಅಡಗಿರುತ್ತದೆ. ಪುರುಷನ ವೀರ್ಯಬೀಜದಲ್ಲಿ ಅಗ್ನಿ ತತ್ತ್ವ ಪ್ರಮುಖ, ಸ್ತ್ರೀ ಬೀಜದಲ್ಲಿ ಸೋಮ=ಚಂದ್ರತತ್ತ್ವ ಪ್ರಮುಖ. ಆದುದರಿಂದ ''ಅಗ್ನಿ'' ಸೋಮೀಯಂ ಜಗತ್'' ಎಂಬ ಮಹಾಮಂತ್ರ ಸಿದ್ಧವಾಯಿತು. ಇದರ ಶುದ್ಧಿ ನವಮಾನವೀಯತೆಯ ನಿರ್ಮಾಣಕ್ಕೆ ಮೂಲಪ್ರೇರಣೆ. ಇದರ ಅಶುದ್ಧಿ ಮಾನವ ಸಂಹಾರದ ದುರಾಶೆ.

''ಓಂಕಾರ ಭೇರಿ ಮೊಳಗಿತ್ತು ಕೃತಯುಗಸಾರಿ
ಜ್ಞಾನಕ್ಷೇತ್ರಕ್ಕೆ ವಿಜ್ಞಾನ ಬೀಜವು ಸೇರಿ''

ನವಮಾನವೀಯತೆಯ ಕೃತಯುಗ ಪ್ರಾರಂಭವಾಗಬೇಕಾದರೆ ಪಾಶ್ಚಿಮಾತ್ಯ ಹಾಗೂ ಭಾರತೀಯ ವಿಜ್ಞಾನಗಳು ಸಹಚಿಂತನೆ ಮಾಡುವುದು ಅವಶ್ಯ ಎಂಬ ನಿರ್ಣಯ ಬೇಂದ್ರೆಯವರದಾಯಿತು. ಭಾರತೀಯ ಋಷಿ ವಿಜ್ಞಾನಿಗಳ ಬಾಯಿ ಮಂತ್ರಗಳನ್ನು ಪಠಿಸಿ ಯಜ್ಞದಲ್ಲಿ ಅಗ್ನಿ ಪ್ರಜ್ವಲನ ಮಾಡುವ ತಂತ್ರ ಅರಿತವರಾಗಿದ್ದರು. ತಂತ್ರವೇ ಯಜ್ಞಸೃಷ್ಟಿಗೆ ತಾಯಿ. ಈ ತಂತ್ರ ಕಳೆದುಕೊಂಡ ಭಾರತೀಯರಾದ ನಾವು ತಾಯಿಯನ್ನೇ ಕಳೆದುಕೊಂಡ ಅನಾಥರಾದೆವು ಎಂಬ ಕೊರಗು ಬೇಂದ್ರೆಯವರಿಗಾಗುತ್ತಿತ್ತು. ಕಾವ್ಯಸೃಷ್ಟಿ ಎಂಬುದು ವಾಕ್‌ಯಜ್ಞ ಎಂಬ ನಿರ್ಣಯ ಬೇಂದ್ರೆಯವರದಾಯಿತು. ಈ ದಿಕ್ಕಿನಲ್ಲಿಯೇ ಬೇಂದ್ರೆಯವರು ೧೯೧೮ರಿಂದ ತನ್ನ ಸಂಪರ್ಕಕ್ಕೆ ಬಂದ ಎಳೆಯರು, ಗೆಳೆಯರು, ವೃದ್ಧರೊಂದಿಗೆ ಮಾತನಾಡುತ್ತಿದ್ದರು. ಇದರ ಮೂಲಕ ಬೇಂದ್ರೆ ಮಾತು ಹಾಗೂ ಕಾವ್ಯ ಅಧ್ಯಾತ್ಮಮಯ ಎಂಬ ಪ್ರಚಾರ ಪ್ರಾರಂಭವಾಗಿ, ವಿಕೃತ ಕಲ್ಪನೆಗೆ ಹಾದಿಯಾಯಿತು.

ಪ್ರತಿ ಜ್ಞಾನಕ್ಕೂ ಸಿದ್ಧಾಂತ ಮತ್ತು ಪ್ರಯೋಗ ಎಂದು ಎರಡು ವಿಭಾಗ. ಪಾಶ್ಚಿಮಾತ್ಯ ವಿಜ್ಞಾನಗಳ ಪ್ರಗತಿ ಪರಸ್ಪರ ಪೂರಕ. ಅಧ್ಯಾತ್ಮದಲ್ಲಿಯೂ ಸಿದ್ಧಾಂತ ಮತ್ತು ಪ್ರಯೋಗ ಮಾರ್ಗ ಇವೆ. ಸಿದ್ಧಾಂತ ಮಾರ್ಗದವರು ಪ್ರತಿಯೊಂದಕ್ಕೂ ಕರ್ತೃ ಯಾರು ಎಂದು ಸಂಶೋಧಿಸುತ್ತಾರೆ. ಪ್ರಯೋಗ ಮಾರ್ಗದವರು ಇದಕ್ಕಾಗಿ - ದೇವ, ಪೂಜೆ, ಭಜನೆ, ಕೀರ್ತನೆ, ತೀರ್ಥಯಾತ್ರೆ ಮೊದಲಾದವುಗಳಲ್ಲಿ ಸತತವಾಗಿ ತೊಡಗಿರುತ್ತಾರೆ. ಬೇಂದ್ರೆ ಈ ರೀತಿಯ ಅಧ್ಯಾತ್ಮ ಮಾರ್ಗದವರಲ್ಲ, ಇವರು ಸಂಪ್ರದಾಯವಾದಿಗಳಲ್ಲ. ಸಂಪ್ರದಾಯವನ್ನೇ ಪ್ರಶ್ನಿಸುವ ಸಂಶೋಧಕರು. ಆದುದರಿಂದ ಬೇಂದ್ರೆಯವರ ಅಧ್ಯಾತ್ಮ ಮಾನವನ ಶುದ್ಧ ಭಾವ, ಶುದ್ಧ ಬುದ್ಧಿ, ಶುದ್ಧ ಮನಸ್ಸು ಸಂಸ್ಕಾರಗೊಳಿಸುವುದಕ್ಕಾಗಿಯೆ ತಮ್ಮ ಕಾವ್ಯಯಜ್ಞ=ಕಾವ್ಯ+ಉತ್‌ಯೋಗ ಕಾವ್ಯೋದ್ಯೋಗ ಸಾಧನೆಯಲ್ಲಿ ತೊಡಗಿತು. ಅವರಲ್ಲಿ ಪ್ರಮುಖವಾಗಿ ಸ್ಥಾಯಿಸ್ವರೂಪಿಯಾಗಿದ್ದ ಕವಿ ವಿಜ್ಞಾನಿ. ಪೃಥ್ವಿಯ ಬಗ್ಗೆ ಗೌರವ ತಾಳಲು; ಮನುಷ್ಯನ ಜನನದಲ್ಲಿ ಭಾವಶುದ್ಧವಾಗಲು ಹಾಗೂ ಮನುಷ್ಯನು ತನ್ನ-ಮನ, ಆಮನ, ಪ್ರಮನ, ವಿಮನ, ಸಂಮನ, ಅಭಿಮನ ಹಾಗೂ ಉತ್-ಉನ್‌ಮನ ಎಂಬ ಏಳು ನೆಲೆಗೆ ಏರುವ ಶಾಶ್ವತ ಪ್ರಯತ್ನಮಾಡಲು ಶುದ್ಧಬುದ್ಧಿಯುಳ್ಳವನಾಗಲು ತನ್ನ ಕಾವ್ಯಸಂದೇಶಗಳನ್ನು ಅತ್ಯಂತ ಸರಳವಾದ ಭಾಷೆಯಲ್ಲಿ

ಅಭಿವ್ಯಕ್ತಪಡಿಸತೊಡಗಿದೆನು. ಆದುದರಿಂದ ಬೇಂದ್ರೆ ಕವಿ, ಅಧ್ಯಾತ್ಮವಾದಿಯಲ್ಲ. ಅವರು ಅಧ್ಯಾತ್ಮ ಸಿದ್ಧಾಂತವನ್ನು ಕಾವ್ಯಪ್ರಯೋಗ ಮಾಧ್ಯಮದ ಮೂಲಕ ವಿಶ್ವವನ್ನೇ ತನ್ನ ಕಾವ್ಯದಲ್ಲಿ ದೇಶ್ಯ-ಕಾವ್ಯಭಾಷೆ ಹಾಗೂ ಸಂಖ್ಯಾ ವಿಶ್ವಭಾಷೆ ಬಳಸಿದ್ದು ಪ್ರಮುಖವಾದ ಸಿದ್ಧಿಗಳು.

ಪೃಥ್ವಿಯ ಬಗ್ಗೆ ಗೌರವ :

(೧) ಹೂವ ಹಡಲಿಗೆಯನ್ನು ಹೊತ್ತ
ಭೂಮಿತಾಯಿ ಜೋಗತಿ।
ಮೈತುಂಬಿ ಕುಣಿಯುತಿಹಳ-
ನಂತ ಕಾಲವೀಗತಿ!

(೨) ತನ್ನ ತಾ ಸುತ್ತ್ಯಾಳೊ
ಹೊತ್ತಿನ ಬೆನ್ಹತ್ತ್ಯಾಳೊ
ತಿಂಗಳನ ಬಗಲಾಗೆತ್ತ್ಯಾಳೊ
ಗೆಣೆಯಾ! ಎತ್ತ್ಯಾಳೋ
ಉಕ್ಕುಕ್ಕುವ ದುಃಖ ಒಳಗೊತ್ತ್ಯಾಳೊ
ನಿಂತ ನೆಲೆವೆಂದು ಕಡಿಲಾಕೊ
ಬಡಿಲಾಕೊ, ಒಡಿಲಾಕೋ
ಒಡವ್ಯಲ್ಲೋ ಮಗನೇ ಉಸಿರಿದ್ದೊಡಲಂತಾಳೋ!

ಈ ಸಂದೇಶ ಭಾರತೀಯರು, ಪಾಶ್ಚಿಮಾತ್ಯರು ತಿಳಿದುಕೊಂಡು, ಪೃಥ್ವಿಯ ಸರಿಯಾದ ಜ್ಞಾನ ಮಾಡಿಕೊಳ್ಳುವ ಮನಸ್ಸಿನ ಪರಿವರ್ತನೆ ಮಾಡಿಕೊಳ್ಳದಿದ್ದರೆ ಜಗತ್ತಿನ ಸರ್ವನಾಶ ಖಂಡಿತ. ಪೃಥ್ವಿ-ಬಹುರತ್ನಾ ವಸುಂಧರಾ ಹೌದು! ಪೃಥ್ವಿಗೂ ಜೀವ ಉಂಟು. ಮನುಷ್ಯನ ತಾಯಿ ಪೃಥ್ವಿ! ಅವಳ ತೊಡೆಯ ಮೇಲೆ ಬೆಳೆದವನು ಭೂಪತಿಯಾಗುವ ಬಂಡವಾಲಶಾಹಿಯಾದರೆ ಪ್ರಜೆಗೆ ಸೌಖ್ಯಬರುವದು ಹೇಗೆ ಸಾಧ್ಯ ಎಂಬುದು ಬೇಂದ್ರೆ ಕೇಳಿದ ಪ್ರಮುಖ ಪ್ರಶ್ನೆ. ಈ ಪ್ರಶ್ನೆಗೆ ಸಕಲ ಮಾನವರ ಶುದ್ಧ ಆಚರಣೆಯಿಂದ ಉತ್ತರ ಲಭಿಸಬೇಕಾಗಿದೆ.

ಶುದ್ಧಭಾವ, ಶುದ್ಧಬುದ್ಧಿ ಉನ್‌ಮನ ಸಿದ್ಧಿ :

(೧) ಕತ್ತೆತ್ತಲೆ ಕತ್ತಲೆ
ಬೆಳಕಿಗೆ ನೀ ಬಂಧು
ಎಲೆ ಎಲೆ ನೀ ನಿತ್ಯನವ
ಅದರಂತಿದೆ ಈ ಭವ

ಕತ್ತಲೆ ದುಃಖದ ಸಂಕೇತ, ಬೆಳಕು ಸುಖದ ಸಂಕೇತ. ಜಗತ್ತಿಗೆ ಸುಖವಾಗಬೇಕಾದರೆ, ಮನುಷ್ಯನು ನಿತ್ಯನವೋನವ ಪ್ರಜ್ಞೆಉಳ್ಳುವನಾಗದಿದ್ದರೆ ಈ ಭವ=ಭೂಲೋಕದ ಜೀವನ

ದುಃಖದಸಾಗರವಾಗುವುದು ತಪ್ಪದು.

(೨) ಇಲ್ಲಿ ಭೂಮಿಯಲ್ಲಿ ಮನಃ ಸಾಕ್ಷಿಯಲ್ಲಿ
ನೆಲೆಸಬೇಕು ಬಾಳು
ಬೇರೆ ಪರಿಣತಿಯ ಅರಿತ ಬದುಕು, ಉಣ-
ಬೇಕು ನಾಳಿನಾಳು

ನಾಳೆಯನ್ನು=ಭವಿಷ್ಯವನ್ನು ಆಳು=ಮನುಷ್ಯನು ಆಳಬೇಕಾಗಿದ್ದಲ್ಲಿ ಅವನು ತನ್ನ ಮನಸ್ಸನ್ನೆ ಸಾಕ್ಷಿಯಾಗಿಟ್ಟುಕೊಂಡು; ಬದುಕಿನಲ್ಲಿ ಸಕಲ ಪರಿಣತಿಯನ್ನು ಸಾಧಿಸಿ ತನ್ನ ಭೂಲೋಕದ ಬಾಳನ್ನು ಸಫಲ ಮಾಡಿಕೊಳ್ಳಬೇಕು. ವಿಫಲವಾದರೆ, ಅದಕ್ಕೆ ಮಾನವನ ದುಷ್ಟಭಾವ, ದುರ್ಬುದ್ಧಿ ಮತ್ತು ದುಷ್ಟಮನಸ್ಸೇ ಕಾರಣ.

(೧) ''ಮಾನವನಲ್ಲಿ ಶತ್ರು ಶಿಬಿರಗಳು ಇರುವವರೆಗೆ ಯಾವುದೇ ಬಗೆಯ ವೈಜ್ಞಾನಿಕ ಪ್ರಗತಿಯಿಂದಲೂ ಏನೂ ಸಾಧಿಸಲು ಸಾಧ್ಯವಿಲ್ಲ.

(೨) ದ್ವೇಷ, ಅಸೂಯೆ, ವೈರತ್ವಗಳಿಂದ ನಾವು ಪತನಗೊಳ್ಳುವುದು ನಿಶ್ಚಯ.

(೩) ಇಂದು ಬೇಕಾಗಿರುವುದು ಹೊಸ ಪ್ರವೃತ್ತಿಯ ಹೊಸ ಪ್ರಜ್ಞೆಯ ಉದಯ ''ಆಗೋಣು ನಾಳಿನಾ ತಾಯಿ, ತಂದೆ!''

(೪) ವಿಜ್ಞಾನ ಶಾಖೆಗಳ ಬಗ್ಗೆ ವಿರೋಧ ಭಾವನೆ ಇಟ್ಟುಕೊಳ್ಳಬೇಕಾಗಿಲ್ಲ.

(೫) ಮಾನವರಲ್ಲಿ ಸಾಮರಸ್ಯ, ಕೂಡಿಬಾಳಬೇಕು ಎಂಬ ಭಾವನೆ ಹುಟ್ಟಬೇಕಾಗಿದೆ. ಇದಕ್ಕಾಗಿಯೆ ಶ್ರೀ ಅರವಿಂದರು ೧೯೧೪ ರಿಂದ ೧೯೫೦ರ ವರೆಗೆ ಮಹಾತಪಸ್ಸು ಮಾಡಿದ್ದು ಮನಸ್ಸಿನ ಹಲವು ಬಗೆಗಳನ್ನು ವಿವರಿಸಿ ಮಾನವನ ಪರಿಪೂರ್ಣ ಪರಿವರ್ತನೆಗಾಗಿ ''ಆಲ್ ಲೈಫ್ ಈಸ್ ಯೋಗ'' ಎಂಬ ಸಂದೇಶವನ್ನು ಕೊಟ್ಟರು. ಇದು ಬೇಂದ್ರೆ ''ಕಾವ್ಯೋದ್ಯೋಗ'' ತಪದ ಹಾದಿ.

(೬) ಯುದ್ಧಮಾಡು, ಕೊಲ್ಲು, ಸಾಯಿ ಎಂಬ ''ಕಾದಿಮಾರ್ಗ'' (ಕಾದಾಡುವ ಮಾರ್ಗ) ನನ್ನದಲ್ಲ. ನನ್ನದು ಸಾದಿಮಾರ್ಗ = ಸಾಹಿತ್ಯದ ಕಾವ್ಯಮಾರ್ಗ.

(೭) ಸಹಜೀವನ, ಸಹಬಾಳ್ವೆ ಸುಮಸುಖಪ್ರವೃತ್ತಿಯ ಜನರು ಹೆಚ್ಚಾದಂತೆ ಪರಿಪೂರ್ಣ ಪರಿವರ್ತನೆ ಸಾಧ್ಯ.

ಈ ಸಪ್ತ ಭೂಮಿಕೆಗಳನ್ನು ಆಧರಿಸಿ ನನ್ನ ವೈಜ್ಞಾನಿಕ ಚಿಂತನೆ ಸಾಗಿದೆ ಎಂಬುದಾಗಿ ೧೯೬೭ರಲ್ಲಿ ಬೇಂದ್ರೆ ''ವಿಶ್ವಧಾರಣಸೂತ್ರ'' ಎಂಬ ಪುಸ್ತಿಕೆಯನ್ನು ಪ್ರಕಟಿಸಿ ಸಾರಿದರು.

''ಪೂರ್ವ ಪಶ್ಚಿಮದಲ್ಲಿ ನಂಟುಬೆಳೆದು
ಬಂದೀತು ನವಯುಗವು
ನವರೂಪ ತಳೆದು
ಜಯವಾಗತೈತಿ''

ಹೊಗದಿರು ಆ ಪುರಾಣ ಗವಿಗಳಾ
ನವಭಾರತವು ಬರಲಿ
ಏಕರಾಟ್! ಓ ವಿರಾಟ್! ಓ ಸ್ವರಾಟ್!

ದುರ್ಮಾನಸರ ರಾಜಕಾರಣ ಉಡುಗಿಸು
ಖಂಡ ಖಂಡವಖಂಡ ಭೂಮಂಡಲ ನಡುಗಿಸು
ರಕ್ತರಕ್ತದ ತಿಂಡಿ ತಿನಸನು ಅಡಗಿಸು
ನೀಡವ್ವಾ ದಿವ್ಯದೃಷ್ಟಿ
ಮಾನವ ಬಾಂಧವ್ಯ, ಸದ್ಭಾವ ಸೃಷ್ಟಿ

ಓ ಮಾನವಾ! ಬಿಡು ದುರಭಿಮಾನವಾ!
ಓ ದಾನವಾ! ಕೊಡು ಹೃದಯದಾನವಾ!
ಸುಪ್ತ ದುರಹಂಕಾರ ಲುಪ್ತವಾಗಿ
ಇಕ್ಕೋ ಆ ಪುನರ್ಭವಾ
ಆಗೋ ನವೋನವಾ!
ಓ ಮಾನವಾ!''

ಎಂಬ ಕರೆಯನ್ನು ಬೇಂದ್ರೆ ೧೯೬೬ರಲ್ಲಿಯೇ ಕೊಟ್ಟಿದ್ದರು. ಈ ದೃಷ್ಟಿಯಿಂದಲೇ ಬೇಂದ್ರೆಯವರು ಪ್ರಾರಂಭದಿಂದಲೂ ಪುರುಷ ವೀರ್ಯಬೀಜ- ಹಾಗೂ ಸ್ತ್ರೀಬೀಜ ಇವುಗಳ ಸಂಯೋಗದಿಂದ ಜನಿಸುವ ಜನನ-ಜೀವ ರಸಾಯನಶಾಸ್ತ್ರದ ಅಭ್ಯಾಸಮಾಡಿ ೧೯೩೨ರಲ್ಲಿ - ೧೯೩೨ರಲ್ಲಿ -

(೧) ಗಂಡುಹೆಣ್ಣೂ ಕೆರಳುತಿದೆ
ಬೇನೆ ತಿನುತ ನರಳುತಿದೆ
ಸಾಯಲಾರದರಳುತಿದೆ
ಬರುವ ಹಗಲಲಿ!

- ರುದ್ರವೀಣೆ - ಗರಿ

(೨) ''ಕವನ ಕೋಶದಿ ಕಮಲ ಗರ್ಭದಲಿ
ಪರಾಗ ವೊರಗಿಹುದು
ನಿನ್ನ ಮುಖ ಸ್ಪರ್ಶವು ಸಾಕು
ಹೊಸ ಸೃಷ್ಟಿಯೇ ಬರಬಹುದು''
- ಪರಾಗ - ಸಖೀಗೀತ

(೩) ಆ ಮುಖಾ ಈ ಮುಖಾ
ಒಂದು ಸತ್ತು
ಒಂದು ಅತ್ತು
ಒಂದಕೊಂದು ಸಮ್ಮುಖಾ
ಬೇರೆ ಬತ್ತಿ
ದೀಪ ಹತ್ತಿ
ಬೆಳಗುತಿಹುದು ಸ್ನೇಹವಾ
ತುಂಬಿ ಬೇರೆ ದೇಹವಾ
- ಚಿರಂತನ - ಸಖೀಗೀತ

ಸ್ಪಷ್ಟ ವಾಗಿ ವರ್ಣಿಸಿದ್ದರು. ಇವುಗಳನ್ನು ವಿಮರ್ಶಕರು ಕೇವಲ ಭಾವಗೀತ ಎಂದು ಭಾವಿಸಿದರು. ಆದರೆ ಇವು ಜೀವವಿಜ್ಞಾನ ಶಾಸ್ತ್ರ ಆಧರಿಸಿದ ಮಾನವಜೀವೋತ್ಪತ್ತಿ ಚಿಂತನದ ಶ್ರೇಷ್ಠ ಸಂದೇಶಗೀತಗಳಾಗಿವೆ. ತಂದೆಯ ವೀರ್ಯಬೀಜದ ಸ್ಪರ್ಶಕ್ಕಾಗಿ ಸ್ತ್ರೀಬೀಜ ಕಾಯುತ್ತಿರುವುದು. ಅದರ ಸಫಲತೆ=ಗರ್ಭಧಾರಣೆಯಾದಾಗ ತಂದೆಯ ೨೩ ಜೊತೆ ಕ್ರೋಮೋಝೋಮ್ಸ್ ಹಾಗೂ ತಂದೆಯ ೨೩ ಜೊತೆ ಕ್ರೋಮೋಝೋಮ್ಸ್=೪೬+೪೬ ಕೂಡಿ ಮಗುವಿನ ಸ್ವತಂತ್ರ ಸ್ವಭಾವದ ೨೩ ಜೊತೆ ಕ್ರೋಮೋಝೋಮ್ಸ್‌ನಿಂದ ಜನನವಾಗುತ್ತದೆ ಎಂಬುದು ವೈಜ್ಞಾನಿಕ ಸತ್ಯ. ೪೬+೪೬+೪೬=೧೩೮. ಇದರ ಶಬ್ದ ಸಂಕೇತ ''ಹುಡುಕು'' ಎಂಬುದಾಗಿ ೧೯೬೪ರಲ್ಲಿ ಬೇಂದ್ರೆ ಅವರ ನಾಕುತಂತಿ ಕವನಸಂಗ್ರಹದೊಳಗಿನ ''ಡೂ'' ಕವನದಲ್ಲಿ ಸ್ಪಷ್ಟಪಡಿಸಿದರು.

೧೯೫೬ರಲ್ಲಿ -

ತುಂಬಿ ಮೊರೆದು ಪರಮೆಯನು ಕರೆಯುತಿದೆ
ತುಂಬು ಬಾಳಿಗಾಗಿ
ಪರಮ ಜೀವನದ ಜೇನ ಕೂಡಿಸಲು
ಇಂದು ನಾಳೆಗಾಗಿ
- ಪರಮೆ ತುಂಬಿ - ಹೃದಯ ಸಮುದ್ರಾ

ಬೇಂದ್ರೆಯವರು ಜೀವರಸಾಯನಶಾಸ್ತವನ್ನು ಆಳವಾಗಿ ಅಭ್ಯಸಿಸುತ್ತಿರುವಾಗ ಅವರಿಗೆ ರೂಥ ಮೂರ ಬರೆದ ''ದಿ ಕ್ವಾಲಿಟಿ ಆಫ್ ಲೈಫ್'' ಎಂಬ ಪುಸ್ತಕ ಲಭಿಸಿತು. ಅದರಲ್ಲಿ

00133502

''ಫೋರ್ ಈಸ್ ಟ್ವೆಂಟಿ, ಟ್ವೆಂಟಿ ಈಸ್ ಇನ್‌ಫಿನೀಟಿ'' ಎಂಬ ಉಕ್ತಿ ಬೇಂದ್ರೆಯವರನ್ನು ಚಿಂತನೆಗೆ ತೊಡಗಿಸಿತು. ಶ್ರೀ ಅರವಿಂದರು ಬ್ರಹ್ಮ, ವಿಷ್ಣು, ಶಿವ, ಕೃಷ್ಣ ಇವರನ್ನು ಕುರಿತು ಒನ್ ಈಸ್ ಫೋರ್ ಎಂದು ಸಾರಿದ್ದು ನೆನಪಾಯಿತು. ಆಗ ವಿಜ್ಞಾನಿ ಬೇಂದ್ರೆ ೧+೨+೩+೪ ಕೂಡಿಸಿದರೆ ಟೆನ್+ಈ ಟೆನ್‌ದ ದುಪ್ಪಟ್ಟು ಟ್ವೆಂಟಿ. ಇದೇ ಮುಂದೆ ಸಾಗಿದರೆ ಇದು ಜೀವಜನನ ಶಾಸ್ತ್ರ ಅನುಸರಿಸುವ ಕ್ರಮ. ೧=ತಂದೆ, ೨=ತಾಯಿ; ೩=ಜೀವಮಗು; ೪=ಸ್ತ್ರೀಬೀಜ+ಪುರುಷ ಬೀಜ ಸಂಯೋಗಕ್ರಿಯೆ ಎಂದೇ ಅರ್ಥೈಸಿದರು. ತಂದೆ, ತಾಯಿ, ಮಗು ಮತ್ತು ಸಂಯೋಗ ಎಂಬ ನಾಲ್ಕರಲ್ಲಿ ಐಕ್ಯವಾಗದೆ ನಾಳಿನ ಭವಿಷ್ಯದ ಬಾಗಿಲು ತೆರೆಯುವುದಿಲ್ಲ, ಈ ನಾಕೂ ಅಂಶಗಳಲ್ಲಿ ಸದ್ಭಾವದ ಹೆರಿಗೆ ಆಗಲೇಬೇಕು ಎಂಬ ನಿರ್ಣಯಕ್ಕೆ ಬೇಂದ್ರೆ ತಲುಪಿದರು.

ಜೀವ ರಸಾಯನಶಾಸ್ತ್ರ ಕುರಿತು ೧೯೬೬ರಲ್ಲಿ ಅಭ್ಯಾಸ ಮಾಡಿದರು. ಒಂಭತ್ತು ವಿಜ್ಞಾನಿಗಳ ಸಂಶೋಧನ ಲೇಖನಗಳಿದ್ದು, ಮೂರು ಲೇಖಕರು ನೋಬೆಲ್ ಬಹುಮಾನ ಪಡೆದವರು. ಇವರೆಲ್ಲರೂ ಮಾನವನ ಉತ್ತಮ ಭವಿಷ್ಯ ಕುರಿತು ಚಿಂತಿಸಿದರು. ಇದನ್ನು ಭಾರತೀಯ ಋಷಿ ಹಾಗೂ ಸಂತರು ''ದಾ.ದ.ರಾ'' ಎಂಬ ಮೂರು ಸಂಕೇತ ಅಕ್ಷರಗಳಿಂದ ಮನುಷ್ಯನ ಮೇರುದಂಡದಲ್ಲಿ = ಬೆನ್ನಹುರಿಯಲ್ಲಿರುವ ಷಟ್‌ಚಕ್ರ ಹಾಗೂ ಸಹಸ್ರದಲ ಕುರಿತು ಬರೆದದ್ದು ಬೇಂದ್ರೆ ನೆನಿಸಿಕೊಂಡು-

''ಸದ್ಭಾವವಿಲ್ಲದೆ, ಪ್ರಮಾಣಭಾಷೆಯ
ತಂತ್ರ ಚಾಚುವುದು ಆತ್ಮವಂಚನೆ
ಪರಮವಂಚನೆ
ಆ ಪ್ರಜ್ಞಾನವು ಅಜ್ಞಾನ''

ಎಂದು ಗ್ರಂಥದಲ್ಲಿಯೇ ಬರೆದಿಟ್ಟಿದ್ದಾರೆ. ಜಗತ್ತಿನ ಮಾನವರಲ್ಲಿ ಪರಸ್ಪರರ ಬಗ್ಗೆ ಸದ್ಭಾವ ಎಲ್ಲಿಯವರೆಗೆ ಜಾಗೃತಿಯಾಗುವುದಿಲ್ಲವೋ ಅಲ್ಲಿಯವರೆಗೆ ವಿಶ್ವದ ಕಲ್ಯಾಣ ಕುರಿತು ಬಾಯಿಬಿಡಬಾರದು ಎಂದು ಬೇಂದ್ರೆ ಎಚ್ಚರಿಸಿದ್ದಾರೆ. ಇದಕ್ಕಾಗಿಯೇ ಬೇಂದ್ರೆ - ರಕ್ತ ಮಾನವನ ಮನಸ್ಸು, ಹೃದಯ ಹಾಗೂ ವಿವೇಕವನ್ನು ಆಳವಾಗಿ ಅಭ್ಯಸಿಸಿ ಅವರ ''ಔದುಂಬರ ಗಾಥೆ'' ಎಂಬ ಜೀವನ ಮಹಾಕಾವ್ಯ ಸೃಷ್ಟಿಸಿದ್ದು. ಈ ದಿಕ್ಕಿನಲ್ಲಿ ಬೇಂದ್ರೆ ಕಾವ್ಯದ ಅಭ್ಯಾಸ ಆಗಬೇಕಾಗಿದೆ. ಆಗ ಬೇಂದ್ರೆಯವರ ''ನಮನ'' ಕವನ ಸಂಗ್ರಹದೊಳಗಿನ ''ಚತ್ವಾರಿ ವಾಣಿ'' ಎಂಬ ಕವನದಲ್ಲಿಯ ''ಜನಕೆ ಜನನದ ಕೋಡು - ನಾಕ'' ಎಂಬ ಸಾಲಿನ ಅರ್ಥ ಸ್ಪಷ್ಟವಾದೀತು.

element 118

Atomic Number : 118
Atomic Symbol : Uuo
Atomic Weight : ?
Electron Configuration: ?

Officiall unnamed, officially unfound

In 1999, the team at Lawrence Berkley Labs published a paper in the journal *Physical Review Papers* proclaiming their discovery of element 118. The scientific community exploded, hoping that the decay time of 118 (eka-radon) would longer than that of 114. Element 116 was also synthesized during this reaction, which used cold fusion to fuse ^{108}Pb and ^{86}Kr atoms together.

Lawrence Berkley Labs officially retracted their paper in 2001, saying that they had actually misinterpreted their data. Despite this, efforts to produce element 118 have not halted and element 118 may yet still be synthesized.

(Last Updated : 10-20-2003 © Chemistry Operations

ಬೇಂದ್ರೆ ಹಾಗೂ ವಿಜ್ಞಾನ

ವರಕವಿ ಡಾ||ದ.ರಾ. ಬೇಂದ್ರೆ ಮಹಾಕವಿಗಳಾಗಿದ್ದಂತೆ ಮಹಾವಿಜ್ಞಾನಿಗಳೂ ಆಗಿದ್ದರು ಎನ್ನುವ ಸತ್ಯ ಪ್ರಕಟವಾಗದೆ, ಅವರ ಪ್ರಕಾಂಡ ಸಾಹಿತ್ಯ ಪ್ರಕಾಶದಲ್ಲಿ ಅಡಗಿಹೋಗಿತ್ತು. ಆದರೆ ಬೇಂದ್ರೆಯವರು ವಿಜ್ಞಾನದ ಮಹತ್ವದ ಕ್ಷೇತ್ರಗಳಾದ ಪ್ರೈಮ್ ನಂಬರ್ಸ್, ಪರ್‌ಫೆಕ್ಟ್ ನಂಬರ್ಸ್, ಪೀರಿಯಾಡಿಕ್ ಟೇಬಲ್, ಬಯೋ-ಕೆಮಿಸ್ಟ್ರಿ ಮುಂತಾದ ಅನೇಕ ವಿಷಯಗಳನ್ನು ಕುರಿತು ಆಳವಾಗಿ ಅಧ್ಯಯನಮಾಡಿ, ನವೀನ ಸಂಶೋಧನೆಗಳನ್ನು ಮಾಡಿದ್ದರು. "ಬೇಂದ್ರೆ ಹಾಗೂ ವಿಜ್ಞಾನ" ಎಂಬ ವಿಷಯವನ್ನು ಕುರಿತು ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗದವರಿಂದ "ದ.ರಾ. ಬೇಂದ್ರೆ ದತ್ತಿ ಉಪನ್ಯಾಸ"ವನ್ನು ಡಾ||ಕೆ.ಎಸ್.ಶರ್ಮಾ ನೀಡಲು ಆಮಂತ್ರಿಸಲ್ಪಟ್ಟಿದ್ದರು. ಈ ಸಭೆಯ ಅಧ್ಯಕ್ಷತೆಯನ್ನು ಡಾ||ವಾಮನ ಬೇಂದ್ರೆ ವಹಿಸಿದ್ದರು. ಈ ಇಬ್ಬರೂ ನೀಡಿದ ಉಪನ್ಯಾಸಗಳನ್ನು ಸಂಗ್ರಹಿಸಿ ಈ ಕಿರುಹೊತ್ತಿಗೆಯನ್ನು ಪ್ರಕಟಿಸುತ್ತಿದ್ದೇವೆ. ಬೇಂದ್ರೆ ವಿಜ್ಞಾನ ಚಿಂತನೆಗಳ ಪ್ರಥಮ ಪರಿಚಯ ಪುಸ್ತಿಕೆ ಇದಾಗಿದೆ. ಬೇಂದ್ರೆಯವರ ವಿಜ್ಞಾನ ತಜ್ಞತೆ ಓದುಗರನ್ನು ಬೆರಗುಗೊಳಿಸದೇ ಇರಲಾರದು. ಬೇಂದ್ರೆ "ವಿಜ್ಞಾನ ಗಾರುಡಿಗ"ರೂ ಆಗಿದ್ದರೆಂದರೆ ಆಶ್ಚರ್ಯಪಡಬೇಕಾಗಿಲ್ಲ.

—ಪ್ರಕಾಶಕರು.